# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2023-24ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದ ಕೃಷಿ ಭಾಗ್ಯ ಯೋಜನೆ ಅನುಷ್ಠಾನ ಕುರಿತು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: AGRI/156/AML/2023, ದಿನಾಂಕ:17-11-2023.
2.ಕೃಷಿ ಆಯುಕ್ತರು, ಕೃಷಿ ಇಲಾಖೆ ಇವರ ಪತ್ರ ಸಂಖ್ಯೆ:ಜಕೃನಿ(ಬೆಲಿ)/ಕೃ.ಭಾ/ಮಾರ್ಗಸೂಚಿ/2023-24, ದಿನಾಂಕ:23-11-2023.

***

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, 2023-24ರ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-39ರಲ್ಲಿ ಘೋಷಿಸಿರುವಂತೆ 2023-24ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ರೂ.200.00 ಕೋಟಿಗಳ ಅನುದಾನದಲ್ಲಿ ರಾಜ್ಯದ 24 ಜಿಲ್ಲೆಗಳ 106 ತಾಲ್ಲೂಕುಗಳಲ್ಲಿ ಮಳೆಯಾಶ್ರಿತ ಕೃಷಿ ನೀತಿ, 2014ರನ್ವಯ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಕೃಷಿ ಆಯುಕ್ತರು ಕೃಷಿ ಇಲಾಖೆ, ಇವರು 2023-24ನೇ ಸಾಲಿನಲ್ಲಿ ರಾಜ್ಯದ 24 ಜಿಲ್ಲೆಗಳ 106 ತಾಲ್ಲೂಕುಗಳಲ್ಲಿ ಮಳೆಯಾಶ್ರಿತ ಕೃಷಿ ನೀತಿ, 2014ರನ್ವಯ ಪ್ಯಾಕೇಜ್ ಮಾದರಿಯಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಗಳನ್ನು ಸಲ್ಲಿಸಿ, ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: AGRI/156/AML/2023**
**ಬೆಂಗಳೂರು, ದಿನಾಂಕ:13-12-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2023-24ನೇ ಸಾಲಿನಲ್ಲಿ ರಾಜ್ಯದ 24 ಜಿಲ್ಲೆಗಳ 106 ತಾಲ್ಲೂಕುಗಳಲ್ಲಿ ಮಳೆಯಾಶ್ರಿತ ಕೃಷಿ ನೀತಿ, 2014ರನ್ವಯ ಪ್ಯಾಕೇಜ್ ಮಾದರಿಯಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಈ ಆದೇಶಕ್ಕೆ ಲಗತ್ತಿಸಿರುವ

.........2

ಅನುಬಂಧದಲ್ಲಿನ ವಿಸ್ತೃತ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

P. Satya 13/12/2023

**(ಪಿ. ಸತ್ಯಭಾಮ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

**ಇವರಿಗೆ-**

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ) / (ಎ ಮತ್ತು ಇ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಯೋ. ಕಾ.ಸಂ & ಸಾಂ.ಇ) , ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ.
3. ಸರ್ಕಾರದ ಕಾರ್ಯದರ್ಶಿ( ಆ&ಸಂ), ಆರ್ಥಿಕ ಇಲಾಖೆ, ವಿಧಾನಸೌಧ.
4. ಆಯುಕ್ತರು/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
5. ಕೃಷಿ ಆಯುಕ್ತರು/ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
7. ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
9. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು:**

1. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.

*******

**ಸರ್ಕಾರಿ ಆದೇಶ ಸಂಖ್ಯೆ: AGRI/156/AML/2023, ಬೆಂಗಳೂರು, ದಿನಾಂಕ:13-12-2023 ರ ಅನುಬಂಧ**

# ಕೃಷಿ ಭಾಗ್ಯ ಯೋಜನೆಯ ಮಾರ್ಗಸೂಚಿ -2023

## 1. ಪೀಠಿಕೆ:

ಕರ್ನಾಟಕ ರಾಜ್ಯವು ಮಳೆಯಾಶ್ರಿತ ಕೃಷಿಯ ಮೇಲೆ ಹೆಚ್ಚು ಅವಲಂಬಿತವಾಗಿರುವುದರಿಂದ ಹವಾಮಾನ ಬದಲಾವಣೆಯಿಂದ ಗಂಭೀರವಾಗಿ ಪ್ರಭಾವಕ್ಕೊಳಗಾಗುವ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಬೆಳೆ ಹಂಗಾಮುಗಳಲ್ಲಿ ಹೆಚ್ಚುತ್ತಿರುವ ಮಧ್ಯಮ ಶ್ರೇಣಿಯ ಬರ ಮತ್ತು ಪ್ರವಾಹಗಳಿಂದ ಮಳೆಯಾಶ್ರಿತ ಕೃಷಿಯು ಅನಿಶ್ಚಿತವಾಗಿರುತ್ತದೆ. ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಜೀವನಾಧಾರಿತ ಕೃಷಿಯಿಂದ ಸುಸ್ಥಿರ ಕೃಷಿಯನ್ನಾಗಿ ರೈತರ ಜೀವನ ಮಟ್ಟವನ್ನು ಉತ್ತಮಪಡಿಸಲು ಕೃಷಿ ಭಾಗ್ಯ ಯೋಜನೆಯನ್ನು ನಿರಂತರವಾಗಿ ಐದು ಒಣ ಹವಾಮಾನ ವಲಯಗಳಲ್ಲಿ ಅನುಷ್ಠಾನಗೊಳಿಸುವ ಉದ್ದೇಶದೊಂದಿಗೆ ಮಳೆಯಾಶ್ರಿತ ಕೃಷಿ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಕೃಇ 08 ಕೃಯೋಕಾ 2014 ಬೆಂಗಳೂರು ದಿನಾಂಕ 22-07-2014 ರಲ್ಲಿ ಹೊರಡಿಸಲಾಗಿರುತ್ತದೆ. ಇದರನ್ವಯ ಕೃಷಿ ಭಾಗ್ಯ ಯೋಜನೆಯನ್ನು ಮಳೆಯಾಶ್ರಿತ ರೈತರ ಜೀವನ ಮಟ್ಟವನ್ನು ಉತ್ತಮಪಡಿಸಲು ಕೃಷಿ ಭಾಗ್ಯ ಯೋಜನೆಯನ್ನು (ಮೊದಲನೇ ಹಂತ) 2014-15 ನೇ ಸಾಲಿನಿಂದ 2019-20 ನೇ ಸಾಲಿನ ವರೆಗೆ ಅನುಷ್ಠಾನಗೊಳಿಸಲಾಗಿತ್ತು. 2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿ ಸಹಾಯಧನ ಪಾವತಿಯಾಗದೇ ಬಾಕಿ ಉಳಿದ ಘಟಕಗಳಿಗೆ 2020-21 ನೇ ಸಾಲಿನಲ್ಲಿ ಅನುದಾನ ಒದಗಿಸಲಾಗಿತ್ತು. ಕೃಷಿ ಭಾಗ್ಯ ಯೋಜನೆಯಡಿ (ಮೊದಲನೇ ಹಂತ) 2014-15 ನೇ ಸಾಲಿನಿಂದ 2020-21 ನೇ ಸಾಲಿನವರೆಗೆ 2,89,827 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದ್ದು ಸದರಿ ಕೃಷಿ ಹೊಂಡಗಳಲ್ಲಿ ಸುಮಾರು 1472.32 ಲಕ್ಷ ಘ.ಮೀ. ನೀರನ್ನು ಶೇಖರಣೆ ಮಾಡುವ ಸಾಮರ್ಥ್ಯ ಹೊಂದಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು ಶೇ.64 ರಷ್ಟು ಸಾಗುವಳಿ ಪ್ರದೇಶವು ಮಳೆ ಆಶ್ರಿತ ಪ್ರದೇಶವಾಗಿರುತ್ತದೆ. ಇದರಲ್ಲಿ ಶೇ.55 ರಷ್ಟು ಆಹಾರ ಧಾನ್ಯಗಳ ಮತ್ತು ಶೇ.75 ರಷ್ಟು ಎಣ್ಣೆಕಾಳುಗಳ ಉತ್ಪಾದನೆಯು ಮಳೆಯಾಶ್ರಿತ ಪ್ರದೇಶದ ಕೊಡುಗೆಯಾಗಿದೆ. ನೀರಾವರಿ ಪ್ರದೇಶದ ರೈತರಿಗೆ ನೀರಿನ ಲಭ್ಯತೆ ಖಚಿತವಾದ ಕಾರಣ ನೀರಾವರಿಯಲ್ಲಿ ನಿರೀಕ್ಷಿತ ಆದಾಯ ಸಿಗುವುದರಿಂದ, ವಿವಿಧ ಯೋಜನೆಗಳ ಅನುಕೂಲಗಳನ್ನು ಪಡೆದು ವ್ಯವಸಾಯದಲ್ಲಿ ಹೂಡುವಳಿ ಮಾಡುತ್ತಾರೆ. ಆದರೆ ಒಣ ಭೂಮಿ ರೈತರ ಆದಾಯ ಮಳೆ ಮೇಲೆ ಅವಲಂಬಿತವಾಗಿರುವುದರಿಂದ ಈ ಸವಲತ್ತುಗಳನ್ನು ಬಳಸಿಕೊಳ್ಳಲು ಸಾಧ್ಯವಾಗದೆ ಇವರ ಜೀವನೋಪಾಯದ ಮೇಲೆ ಪ್ರಭಾವ ಬೀರಿದೆ. ಕಡಿಮೆ ಮಳೆ ಬೀಳುವ ಬಹುತೇಕ ಪ್ರದೇಶಗಳಲ್ಲಿ, ರೈತರು 1000 ಅಡಿವರೆಗೂ ಕೊಳವೆಬಾವಿ ಕೊರೆಯಲು ರೂ.2.0 ಲಕ್ಷಗಳನ್ನು ವೆಚ್ಚ ಮಾಡುತ್ತಿದ್ದಾರೆ. ಈ ಕೊಳವೆಬಾವಿ ವಿಫಲವಾದರೆ ಅಥವಾ ಕೆಲವು ವರ್ಷಗಳ ನಂತರ ಬತ್ತಿಹೋದ ಸಂದರ್ಭದಲ್ಲಿ ರೈತರು ಸಾಲಭಾಧೆಗೆ ಸಿಲುಕುತ್ತಿದ್ದಾರೆ. ಆದ್ದರಿಂದ, ರೈತರು ಕೊಳವೆಬಾವಿಯ ಬದಲಾಗಿ ಹೂಡಿಕೆಯನ್ನು ಕೃಷಿ ಭಾಗ್ಯ ಯೋಜನೆಯ ಘಟಕಗಳಲ್ಲಿ ಹೂಡಿಕೆ ಮಾಡಿ ಸುಸ್ಥಿರ ಕೃಷಿಗಾಗಿ ಬಳಸಬಹುದಾಗಿದೆ.

2023-24ರ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಂಡಿಕೆ- 39 ರಲ್ಲಿ "ನಮ್ಮ ಸರ್ಕಾರ ಹಿಂದೆ ಜಾರಿಗೊಳಿಸಿದ್ದ ಕೃಷಿ ಭಾಗ್ಯ ಯೋಜನೆಯು ಅತ್ಯಂತ ಜನಪ್ರಿಯ ಹಾಗೂ ಉಪಯುಕ್ತವಾಗಿತ್ತು. ಈ ಯೋಜನೆಯನ್ನು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯೊಂದಿಗೆ ಸಂಯೋಜಿಸಿ 100 ಕೋಟಿ ರೂ. ವೆಚ್ಚದಲ್ಲಿ ಮರು ಜಾರಿಗೊಳಿಸಲಾಗುವುದು" ಎಂದು ಘೋಷಿಸಿರುತ್ತಾರೆ. ಅದರಂತೆ ಪ್ರಸ್ತುತ ವರ್ಷದಲ್ಲಿ ಪೂರಕ ಅಂದಾಜು-1 ರಲ್ಲಿ ರೂ. 100 ಕೋಟಿಗಳ ಅನುದಾನವನ್ನು ಒದಗಿಸಲು ಸಹಮತಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: AGRI/156/AML/2023 ಬೆಂಗಳೂರು ದಿನಾಂಕ:17-11-2023 ರನ್ವಯ ಅನುಮೋದನೆ ನೀಡಿ ಅಧಿಸೂಚಿಸಲಾಗಿರುತ್ತದೆ.

ಯೋಜನಾ ವ್ಯಾಪ್ತಿ:ಕೃಷಿ ಭಾಗ್ಯ ಯೋಜನೆ ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿ (NDMF)ಯಡಿಯ ಕಾರ್ಯಕ್ರಮವನ್ನು ಮಳೆಯಾಶ್ರಿತ ಕೃಷಿ ನೀತಿ, 2014 ರನ್ವಯರಾಜ್ಯದ 5 ಒಣ ಹವಾಮಾನ ವಲಯಗಳ 24 ಜಿಲ್ಲೆಗಳಲ್ಲಿ (106 ತಾಲ್ಲೂಕುಗಳಲ್ಲಿ) ಅನುಷ್ಠಾನ ಮಾಡಲಾಗುವುದು. ಸದರಿ ಪ್ರದೇಶದ ಅಚ್ಚುಕಟ್ಟು ಪ್ರದೇಶ ಹೊರತುಪಡಿಸಿ ಇತರೆ ಎಲ್ಲಾ ಪ್ರದೇಶದಲ್ಲಿ ಅನುಷ್ಠಾನ ಮಾಡಲಾಗುವುದು.(ಕೃಷಿ ಭಾಗ್ಯ ಯೋಜನೆಯ ಕ್ರಿಯಾ ಯೋಜನೆ ಹಾಗೂ ಜಿಲ್ಲೆ/ತಾಲ್ಲೂಕುಗಳ ವಿವರಗಳನ್ನು **ಅನುಬಂಧ-1A ಮತ್ತು 1B** ರಲ್ಲಿ ಲಗತ್ತಿಸಿದೆ).

**ಕೃಷಿ ಭಾಗ್ಯ ಪ್ಯಾಕೇಜ್ ಯೋಜನೆಯ ಈ ಕೆಳಗಿನ ಅನುಷ್ಠಾನ ಮಾರ್ಗಸೂಚಿಗಳು NDMF, CEPMIZ ಹಾಗೂ ಇನ್ನಿತರ ಯೋಜನೆಗಳಿಂದ ಲಭ್ಯವಾಗುವ ಅನುದಾನಕ್ಕೂ ಅನ್ವಯಿಸುತ್ತವೆ.**

**1. ಯೋಜನೆಯ ಗುರಿ:** ಮಳೆಯಾಶ್ರಿತ ಕೃಷಿ ನೀತಿ, 2014 ರನ್ವಯರಾಜ್ಯದ 5 ಒಣ ಹವಾಮಾನ ವಲಯಗಳ 24 ಬರ ಪೀಡಿತ ಜಿಲ್ಲೆಗಳಲ್ಲಿನ 106 ತಾಲ್ಲೂಕುಗಳಲ್ಲಿ ಹಾಗೂ **ಗಣಿಗಾರಿಕೆಯಿಂದ ಬಾದಿತ ಪ್ರದೇಶದಲ್ಲಿ** ಸುಸ್ಥಿರಕೃಷಿಯನ್ನು ಉತ್ತೇಜಿಸಿ, ಬೆಳೆ ಉತ್ಪಾದಕತೆ ಮತ್ತು ರೈತರ ಜೀವನಮಟ್ಟವನ್ನು ಸುಧಾರಿಸುವುದರೊಂದಿಗೆ ಬರ ಉಪಶಮನದ ಗುರಿಯನ್ನು ಹೊಂದಿರುತ್ತದೆ.

**2. ಯೋಜನೆಯಉದ್ದೇಶಗಳು:**

1. ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು.
2. ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು.
3. ಮಳೆ ನೀರನ್ನು ವ್ಯರ್ಥಮಾಡದೆ ಆಯ್ದುಸ್ಥಳದಲ್ಲಿ ಕೃಷಿ ಹೊಂಡತೆಗೆದು ಜಲ ಸಂಗ್ರಹಿಸಿ, ಬೆಳೆಗಳ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು

**ಕೃಷಿ ಭಾಗ್ಯ ಯೋಜನೆಯಡಿ ಒದಗಿಸಲಾಗುವ ಸೌಲಭ್ಯಗಳ/ಘಟಕಗಳ ವಿವರಗಳು:**

1. ಕ್ಷೇತ್ರ ಬದು ನಿರ್ಮಾಣ
2. ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ)
3. ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ
4. ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Stone Fencing)
5. ಹೊಂಡದಿಂದ ನೀರು ಎತ್ತಲು ಡೀಸೆಲ್ /ಪೆಟ್ರೋಲ್/ಸೋಲಾರ್ ಪಂಪ್ ಸೆಟ್
6. ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ (ತುಂತುರು/ಹನಿ)ನೀರಾವರಿ

**ಕೃಷಿ ಭಾಗ್ಯ ಯೋಜನೆಯಡಿ ನೀಡಲಾಗುವ ಸೌಲಭ್ಯಗಳ ಹಾಗೂ ಸಹಾಯಧನದ ವಿವರ**

| ಕ್ರ. ಸಂ | ಘಟಕ | ಸಹಾಯಧನ | |
|---|---|---|---|
| | | ಸಾಮಾನ್ಯ (%) | ಪ.ಜಾತಿ/ ಪ.ಪಂಗಡ(%) |
| 1 | ಕ್ಷೇತ್ರ ಬದು ನಿರ್ಮಾಣ | 80 | 90 |
| 2 | ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ ) | 80 | 90 |
| 3 | ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ (ಗರಿಷ್ಠ-ರೂ50000) | 80 | 90 |

| | | | |
|---|---|---|---|
| 4 | ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing) | **40** | **50** |
| 5 | ಹೊಂಡದಿಂದ ನೀರು ಎತ್ತಲು ಡೀಸೆಲ್ /ಪೆಟ್ರೋಲ್/ಸೋಲಾರ್ ಪಂಪ್ ಸೆಟ್ (upto 10 HP) | **50** | **90** |
| 6 | ನೀರನ್ನು ಬೆಳೆಗೆ ಹಾಯಿಸಲು ಸೂಕ್ಷ್ಮ (ತುಂತುರು/ಹನಿ) ನೀರಾವರಿ (PMKSY-PDMC / Atal Bhoo Jal ಯೋಜನೆಯ ಒಗ್ಗೂಡಿಸುವಿಕೆಯಡಿ) | 90 | 90 |

**ವಿಶೇಷ ಸೂಚನೆ:**ಕೃಷಿ ಭಾಗ್ಯ ಪ್ಯಾಕೇಜ್‌ನಲ್ಲಿ ಒಟ್ಟಾರೆ 6 ಕಡ್ಡಾಯ ಘಟಕಗಳನ್ನು ಒಳಗೊಂಡಿದ್ದು, ಎಲ್ಲಾ ಘಟಕಗಳನ್ನು ಫಲಾನುಭವಿ ರೈತರು ಯೋಜನೆಯ ಸಮಗ್ರ ಸದುಪಯೋಗ ಪಡೆಯಲು ತಪ್ಪದೇ ಅಳವಡಿಸುವುದು. ಇವುಗಳಲ್ಲಿ

- ಕೃಷಿ ಹೊಂಡ, ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ/ಪರ್ಯಾಯ ಮಾದರಿಗಳು, ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ(GI Wire Stone Fencing) ಘಟಕಗಳಿಗೆ ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸುವುದು.
- ಇನ್ನುಳಿದ ಘಟಕಗಳಾದ ಕ್ಷೇತ್ರ ಬದು ನಿರ್ಮಾಣ, ಡೀಸೆಲ್ /ಪೆಟ್ರೋಲ್/ ಸೋಲಾರ್ ಪಂಪ್ ಸೆಟ್, ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕಗಳನ್ನು ಒಗ್ಗೂಡಿಸುವಿಕೆಯೊಂದಿಗೆ ಪಡೆಯಲು ಅವಕಾಶವಿದ್ದಲ್ಲಿ ಪಡೆಯಬಹುದಾಗಿದೆ **(ಉದಾ:**ಕ್ಷೇತ್ರ ಬದು ನಿರ್ಮಾಣ(MGNREGA/WDC-2); ಡೀಸೆಲ್ /ಪೆಟ್ರೋಲ್ ಪಂಪ್ ಸೆಟ್ (SMAM/ NFSM/STATE FM) /ಸೋಲಾರ್‌ಪಂಪ್ ಸೆಟ್ (PM-KUSUM/ತೋಟಗಾರಿಕಾ ಇಲಾಖೆ);ಸೂಕ್ಷ್ಮ (ತುಂತುರು/ಹನಿ) ನೀರಾವರಿ(PMKSY-PDMC/Atal Bhoo Jal**)**. ಇತರೆ ಯೋಜನೆಗಳ ಒಗ್ಗೂಡಿಸುವಿಕೆಯಡಿ ಅನುದಾನ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸುವುದು.
- ಎಲ್ಲಾ ಘಟಕಗಳನ್ನು ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನಗೊಳಿಸಿದರೆ ಯೋಜನೆಯ ಉದ್ದೇಶ ನೇರವೇರುತ್ತದೆ. ಆದುದರಿಂದ ರೈತರಿಗೆ ಎಲ್ಲಾ ಘಟಕಗಳನ್ನು ಅಳವಡಿಕೆ ಮಾಡಿಕೊಳ್ಳಲು ಮನವರಿಕೆ ಮಾಡುವುದು.

## ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಮಾರ್ಗಸೂಚಿಗಳು:

### 3.1: ಅರಿವು ಮೂಡಿಸುವ ಕಾರ್ಯಕ್ರಮ/ ತರಬೇತಿಗಳು:

- ಕೃಷಿ ಭಾಗ್ಯ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯೋಜನೆಯ ಬಗ್ಗೆ ರೈತರಿಗೆ ಪತ್ರಿಕಾ ಪ್ರಕಟಣೆ/ಸಮೂಹ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರವನ್ನು ಕಡ್ಡಾಯವಾಗಿ ಕೈಗೊಳ್ಳುವುದು.
- ಜಿಲ್ಲಾ ಮಟ್ಟದಲ್ಲಿ ಕೃಷಿ ಹಾಗೂ ಕೃಷಿಯೇತರ ಇಲಾಖಾ ಅಧಿಕಾರಿಗಳಿಗೆ, ಜನ ಪ್ರತಿನಿಧಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ತಾಲ್ಲೂಕು ಮಟ್ಟದಲ್ಲಿ ಪ್ರಗತಿಪರ ರೈತರಿಗೆ/ ರೈತ ಫಲಾನುಭವಿಗಳಿಗೆ ಸದರಿ ಪ್ಯಾಕೇಜಿನ ಖರ್ಚು-ವೆಚ್ಚದ ಬಗ್ಗೆ ವಿವರವಾದ ಮಾಹಿತಿಯೊಂದಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಹೋಬಳಿ/ಗ್ರಾಮ ಮಟ್ಟದಲ್ಲಿ ಫಲಾನುಭವಿ ರೈತರಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.

**3.2: ಫಲಾನುಭವಿಯ ಆಯ್ಕೆ:**

- ರಾಜ್ಯ ಕೃಷಿ ಹವಾಮಾನ ಒಣ ವಲಯದ ಯಾವುದೇ ಆಸಕ್ತ ರೈತರು ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನ ಮಾಡಲು ಮುಂದೆ ಬಂದಲ್ಲಿ ಅಂತಹ ರೈತರಿಂದ ಅರ್ಜಿಗಳನ್ನು ಸ್ವೀಕರಿಸಿ, ಕ್ಷೇತ್ರ ಪರಿಶೀಲಿಸಿ ಅರ್ಹರಿಗೆ ಕಾರ್ಯಾದೇಶ ನೀಡಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
- ರೈತ ಸಂಪರ್ಕ ಕೇಂದ್ರಗಳಲ್ಲಿ ಸ್ವೀಕೃತವಾದ ಅರ್ಜಿಗಳ ಜೇಷ್ಠತೆಯನ್ನು ವಹಿಯಲ್ಲಿ ಪ್ರತ್ಯೇಕವಾಗಿ ನಿರ್ವಹಿಸುವುದು.
- ಜೇಷ್ಠತೆ ಆದಾರದ ಮೇಲೆ K-KISAN ತಂತ್ರಾಂಶದಲ್ಲಿ ನೋಂದಣಿಯಾಗಿ ಆಯ್ಕೆಯಾದ ಅರ್ಹ ಅರ್ಜಿಗಳ (Pre-Inspectionಮಾಡಿದಂತಹ) ಜೇಷ್ಠತೆಯ ಆಧಾರದ ಮೇಲೆ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
- ರೈತರ ಒಟ್ಟು ಸಾಗುವಳಿ ಕ್ಷೇತ್ರದ ಒಂದು ಸರ್ವೆ ನಂಬರ್ ನಲ್ಲಿ ಕನಿಷ್ಠ 1 ಎಕರೆ ಇರಬೇಕು (single land parcel).
- ಹಿಂದಿನ ಸಾಲುಗಳಲ್ಲಿ ಕೃಷಿ ಭಾಗ್ಯ ಯೋಜನೆ ಅಥವಾ ಇನ್ಯಾವುದೇ ಯೋಜನೆಯಡಿ ಕೃಷಿ ಹೊಂಡ ಫಲಾನುಭವಿಯಾಗಿರುವ ರೈತರು ಸದರಿ ಯೋಜನೆಗೆ ಅರ್ಹತೆ ಹೊಂದಿರುವುದಿಲ್ಲ (ಕೆ ಕಿಸಾನ್ ಪೋರ್ಟಲ್ ನಡಿ/ಭೌತಿಕವಾಗಿ ಸ್ಥಳ ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು).
- ಪರಿಶಿಷ್ಠ ಜಾತಿ/ಪ.ಪಂಗಡ ರೈತರಿಗೆ ಸರ್ಕಾರದ ನಿರ್ದಿಷ್ಟ ಅನುಪಾತದನ್ವಯ ನೀಡುವುದು.
- ರೈತರಿಂದ ನಿಗದಿತ ನಮೂನೆಯಲ್ಲಿ ಸ್ವೀಕರಿಸಿದ ಅರ್ಜಿಗಳನ್ವಯ ಕೃಷಿ ಭಾಗ್ಯ ಯೋಜನೆಯ ಪೂರ್ಣ ಪ್ಯಾಕೇಜ್‌ನ ಘಟಕಗಳನ್ನು ಅನುಷ್ಠಾನಗೊಳಿಸಲು ಆಸಕ್ತಿಯಿರುವ ಬಗ್ಗೆ ಧೃಡೀಕರಿಸಿಕೊಂಡು ಅಂತಹ ರೈತರನ್ನು ಕ್ಷೇತ್ರ ಪರಿಶೀಲನೆಗೆ ಆಯ್ಕೆ ಮಾಡಿ ಕ್ಷೇತ್ರ ಪರಿಶೀಲನೆ ಕೈಗೊಳ್ಳುವುದು.
- ಕ್ಷೇತ್ರ ಪರಿಶೀಲನೆಯಲ್ಲಿ ಅರ್ಹತೆ ಪಡೆದ ಅರ್ಜಿದಾರರನ್ನು ಆಯ್ಕೆ ಮಾಡುವುದು.
- ಜಿಲ್ಲೆಗಳಿಗೆ ಯೋಜನೆಯಡಿ ನೀಡಿರುವ ಗುರಿಗಳನ್ನು ತಾಲ್ಲೂಕುಗಳಲ್ಲಿನ ಅನುಷ್ಠಾನ ಪ್ರಗತಿಗನುಗುಣವಾಗಿ ಬದಲಾವಣೆ ಮಾಡಲು ಅವಕಾಶವಿರುತ್ತದೆ.
- ರೈತರ ಬೇಡಿಕೆಗನುಗುಣವಾಗಿ ಜಿಲ್ಲೆಯಲ್ಲಿ ಲಭ್ಯವಿರುವ ಅನುದಾನಕ್ಕೆ ತಕ್ಕಂತೆ ಅನುಷ್ಠಾನ ಮಾಡುವುದು.
- ಆಯ್ಕೆಯಾದ ಜಿಲ್ಲೆ/ತಾಲ್ಲೂಕಿನ ಅಚ್ಚುಕಟ್ಟು ಪ್ರದೇಶ ಹೊರತುಪಡಿಸಿ ಫಲಾನುಭವಿ ರೈತರನ್ನು ಆಯ್ಕೆ ಮಾಡುವುದು.

**ರೈತರಿಂದ ಅರ್ಜಿಗಳ ಆಹ್ವಾನ:**

- ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ರೈತರ ಅರ್ಜಿ ನಮೂನೆಯನ್ನು ತಮ್ಮ ಹಂತದಲ್ಲೇ ಮುದ್ರಿಸುವುದು. ಸದರಿ ಅರ್ಜಿಗಳನ್ನು ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಲಭ್ಯವಿರಿಸುವುದು.
- ಭೌತಿಕ ಗುರಿಯನ್ವಯ ಶೇ 20 ರಷ್ಟು ಹೆಚ್ಚಿನ ಅರ್ಜಿಗಳನ್ನು ಸ್ವೀಕರಿಸುವುದು ಹಾಗೂ ಹೆಚ್ಚುವರಿಯಾದ ಸದರಿ ಅರ್ಜಿಗಳನ್ನು ಜೇಷ್ಟತೆಯಲ್ಲಿ ಕಾಯ್ದಿರಿಸುವುದು. ಕಾರ್ಯಾದೇಶ ನೀಡಿದ 15-30 ದಿನಗಳೊಳಗಾಗಿ ಕೃಷಿ ಹೊಂಡ ನಿರ್ಮಿಸದೇ ಇರುವ ಫಲಾನುಭವಿಗಳ ಅರ್ಜಿಗಳನ್ನು ಸ್ಥಗಿತಗೊಳಿಸಿ ಇತರೆ ಫಲಾನುಭವಿಗಳ ಅರ್ಜಿಗಳನ್ನು ಪರಿಗಣಿಸಲು K-KISAN ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗುವುದು.

**ಸೂಚನೆ:** ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಿಂದ ರೈತ ಸಂಪರ್ಕ ಕೇಂದ್ರುವಾರು ಗುರಿ ನಿಗದಿಪಡಿಸುವುದು ಹಾಗೂ ರೈತ ಸಂಪರ್ಕ ಕೇಂದ್ರು ಅಧಿಕಾರಿಗಳು ಸದರಿ ಗುರಿಗೆ ಬದ್ಧರಾಗಿರುವುದು.

**3.3: ಫಲಾನುಭವಿ ನೋಂದಣಿ:**

- ಮೇಲಿನ ಮಾನದಂಡಗಳನ್ವಯ ಅರ್ಹ ರೈತರು ನಮೂನೆ-1 ರಲ್ಲಿ ಅರ್ಜಿಗಳನ್ನು ರೈತ ಸಂಪರ್ಕ ಕೇಂದ್ರುಗಳಲ್ಲಿ ಸಲ್ಲಿಸುವುದು ಹಾಗೂ ಅರ್ಜಿಯಲ್ಲಿನ ಮಾಹಿತಿಯನ್ನು ಭರ್ತಿ ಮಾಡಲು ರೈತರಿಗೆ ಮಾರ್ಗದರ್ಶನ ನೀಡುವುದು.
- ಅರ್ಜಿಯನ್ನು ಸ್ವೀಕರಿಸಿ K-KISAN ತಂತ್ರಾಂಶದಲ್ಲಿ ನೋಂದಣಿ ಮಾಡುವುದು.
- ರೈತರು ಈಗಾಗಲೇ ಲಘು ನೀರಾವರಿ ಘಟಕವನ್ನು ವಿವಿಧ ಇಲಾಖೆಗಳಿಂದ ಸವಲತ್ತು ಪಡೆದಿದ್ದಲ್ಲಿ, ಅಂತಹ ಅರ್ಜಿದಾರರಿಗೆ ಸದರಿ ಘಟಕಗಳನ್ನು ಪಡೆಯಲು ಅವಕಾಶವಿರುವುದಿಲ್ಲ (ಲಘು ನೀರಾವರಿ ಘಟಕವನ್ನು ಸಹಾಯಧನದಡಿ ಪಡೆಯಲು ಸಾಮಾನ್ಯ ವರ್ಗದ ರೈತರಿಗೆ ಒಮ್ಮೆ ಮಾತ್ರ ಹಾಗೂ ಪ.ಜಾ./ಪ.ಪಂ. ರೈತರಿಗೆ ಪ್ರತಿ 7 ವರ್ಷಕ್ಕೊಮ್ಮೆ ಮಾತ್ರ ಅವಕಾಶವಿರುತ್ತದೆ).
- ಹಾಗೆಯೇ ರೈತರು ಈಗಾಗಲೇ ಡೀಸೆಲ್/ಪೆಟ್ರೋಲ್/ಸೋಲಾರ್ ಪಂಪ್‌ಸೆಟ್ ಘಟಕವನ್ನು ಇಲಾಖೆಯ ಇತರೆ ಯೋಜನೆಗಳಡಿ ಸವಲತ್ತು ಪಡೆದಿದ್ದಲ್ಲಿ ಅಂತಹ ಅರ್ಜಿದಾರರಿಗೆ ಡೀಸೆಲ್/ಪೆಟ್ರೋಲ್ /ಸೋಲಾರ್ ಪಂಪ್‌ಸೆಟ್ ನೀಡಲು ಅವಕಾಶವಿರುವುದಿಲ್ಲ.
- ಅನುದಾನ ಲಭ್ಯತೆಯ ಆಧಾರದ ಮೇಲೆ ಎಲ್ಲಾ ಆಸಕ್ತ ರೈತರಿಗೂ ಪ್ಯಾಕೇಜ್ ಮಾದರಿಯಲ್ಲಿ ಸೌಲಭ್ಯ ಕಲ್ಪಿಸಿಕೊಡಲು ಕ್ರಮ ಕೈಗೊಳ್ಳುವುದು.

**3.4: ಅರ್ಜಿದಾರರ ಕ್ಷೇತ್ರ ಪರಿಶೀಲನೆ:**

- ಸ್ವೀಕೃತವಾದ ಅರ್ಜಿದಾರರ ಕ್ಷೇತ್ರ ಪರಿಶೀಲನೆಯನ್ನು ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿK-KISAN Mobile ತಂತ್ರಾಂಶದ (Pre-Inspection) ಮೂಲಕ 7 ದಿನಗಳೊಳಗೆ ಕೈಗೊಳ್ಳುವುದು.
- ಕ್ಷೇತ್ರ ಪರಿಶೀಲನೆಯಲ್ಲಿ ರೈತರ ಒಟ್ಟು ಸಾಗುವಳಿ ಕ್ಷೇತ್ರದ ಒಂದು ಸರ್ವೆ ನಂಬರ್ ನಲ್ಲಿ ಕನಿಷ್ಠ 1 ಎಕರೆಇರುವುದನ್ನು ದೃಢೀಕರಿಸಿಕೊಳ್ಳುವುದು (ಇಲ್ಲವಾದಲ್ಲಿ ರೈತರ 1 ಎಕರೆ ಸಾಗುವಳಿ ಕ್ಷೇತ್ರವು ಒಂದಕ್ಕಿಂತ ಹೆಚ್ಚು ಸರ್ವೆ ನಂಬರ್ ನಲ್ಲಿ ಒಂದೇ ಪ್ರದೇಶದಲ್ಲಿ ಇರುವುದನ್ನು ದೃಢೀಕರಿಸಿಕೊಳ್ಳುವುದು).
- ಕೃಷಿ ಹೊಂಡಗಳ ಗಾತ್ರವನ್ನು ನೀರು ಸಂಗ್ರಹಣಾ ಪ್ರದೇಶದ ಅಳತೆ ಮತ್ತು ರೈತರ ಇಚ್ಛೆಯಂತೆ ನಿರ್ಧರಿಸುವುದು.

**3.5: ಫಲಾನುಭವಿಗಳ ಆಯ್ಕೆ ನಂತರದ ಪ್ರಕ್ರಿಯೆಗಳು:**

- ರೈತ ಸಂಪರ್ಕ ಕೇಂದ್ರದ ಕ್ಷೇತ್ರ ಪರಿಶೀಲನಾವರದಿಯಲ್ಲಿ ಆಯ್ಕೆ ಮಾಡಿದ ಅರ್ಹ ಅರ್ಜಿದಾರರಿಗೆ ಒಂದು ವಾರದೊಳಗೆ ತಾಂತ್ರಿಕ ಮಂಜೂರಾತಿ (Work Sanction Order) ಹಾಗೂ ಕೃಷಿ ಹೊಂಡದ ಅಂದಾಜು ಪಟ್ಟಿ(Estimate) ಯನ್ನು K-KISAN ತಂತ್ರಾಂಶದಲ್ಲಿ ನೀಡುವುದು.

- ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು K-KISAN ತಂತ್ರಾಂಶದಲ್ಲಿ ರೈತರ ಅರ್ಜಿಯನ್ನು ಪರಿಶೀಲಿಸಿ ನಂತರ ಕಾರ್ಯಾದೇಶವನ್ನು (Work Sanction Order) ನೀಡುವುದು.
- ಕಾರ್ಯಾದೇಶವನ್ನು ನೀಡಿದ ನಂತರ, ಕೃಷಿ ಭಾಗ್ಯ ಪ್ಯಾಕೇಜ್ ಮಾದರಿ ಕುರಿತು ರೈತರಿಗೆ ಮಾಹಿತಿ ನೀಡಿ, ಅದರಂತೆ ಘಟಕಗಳಾದ ಕ್ಷೇತ್ರ ಬದು ನಿರ್ಮಾಣ, ಕೃಷಿ ಹೊಂಡ, ಪಾಲಿಥೀನ್ ಹೊದಿಕೆ, ತಂತಿ ಬೇಲಿ, ಡೀಸೆಲ್/ಪೆಟ್ರೋಲ್/ಸೋಲಾರ್ ಪಂಪ್ ಸೆಟ್ ಹಾಗೂ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಅಳವಡಿಕೆಯನ್ನು ಅನುಕ್ರಮವಾಗಿ ಅನುಷ್ಠಾನ ಗೊಳಿಸಲು ಕ್ರಮವಹಿಸುವುದು.
- ಸದರಿ ಘಟಕಗಳ ಅನುಷ್ಠಾನಕ್ಕೆ ತಂತ್ರಾಂಶದಲ್ಲಿ ನೀಡಿರುವ Flow Chart ನ ವೇಳಾಪಟ್ಟಿಯನ್ವಯ ಕ್ಷೇತ್ರದ GPS ಫೋಟೋ ಹಾಗೂ ಅಳತೆ ಪುಸ್ತಕದಲ್ಲಿ ದಾಖಲೀಕರಣ ಮಾಡುವುದು.
- ಎಲ್ಲಾ ಘಟಕಗಳನ್ನು ಅನುಷ್ಠಾನಗೊಳಿಸಿ ಅದಕ್ಕೆ ಸಂಬಂಧಪಟ್ಟ ಅಗತ್ಯ ದಾಖಲಾತಿಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
- ಸಹಾಯಕ ಕೃಷಿ ನಿರ್ದೇಶಕರು ಹಾಗೂ ಉಪ ಕೃಷಿ ನಿರ್ದೇಶಕರು, ಪ್ರತಿ ಘಟಕದ ಅನುಷ್ಠಾನದ ನಂತರ ನಿಯಮಾನುಸಾರ ಪರಿಶೀಲಿಸಿ ವೆಚ್ಚ ಭರಿಸಲು ಅಗತ್ಯ ಕ್ರಮ ವಹಿಸುವುದು.
- ಪ್ರಸಕ್ತ ಸಾಲಿನಲ್ಲಿ ಜಿಲ್ಲಾವಾರು ನಿಗಧಿಪಡಿಸಿದ ವಾರ್ಷಿಕ ಕಾರ್ಯಕ್ರಮದನ್ವಯ, ರೈತರಿಂದ ಅರ್ಜಿಗಳನ್ನು ಪಡೆದು, ವಿವರಗಳನ್ನು ತಂತ್ರಾಂಶದಲ್ಲಿ ನೊಂದಾಯಿಸಿ, ನಂತರ ಕ್ಷೇತ್ರ ಪರಿಶೀಲನೆ ಕೈಗೊಂಡು, ಜೇಷ್ಠತಾ ಆಧಾರದ ಮೇಲೆ ಅರ್ಹ ರೈತರಿಗೆ ಕಡ್ಡಾಯವಾಗಿ ತಂತ್ರಾಂಶದ ಮೂಲಕವೇ ಕಾರ್ಯಾದೇಶವನ್ನು ನೀಡುವುದು.
- ಘಟಕ ಅನುಷ್ಠಾನದ ಪ್ರತಿ ಹಂತವನ್ನು ಗಣಕೀಕರಿಸಿದ ನಂತರ ವೆಚ್ಚ ಭರಿಸುವುದು.
- ವಾರ್ಷಿಕ ಕಾರ್ಯಕ್ರಮಕ್ಕಿಂತ ಹೆಚ್ಚುವರಿಯಾಗಿ ಕೃಷಿ ಹೊಂಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬೇಡಿಕೆ ಬಂದಲ್ಲಿ, ತಪ್ಪದೇ ಕೇಂದ್ರ ಕಛೇರಿಯಿಂದ ಪೂರ್ವಾನುಮತಿಯನ್ನು ಪಡೆದ ನಂತರವೇ ಅನುಷ್ಠಾನಗೊಳಿಸುವುದು.
- ಯೋಜನೆಯಡಿ ಅರ್ಜಿ ಸಲ್ಲಿಸಿದ ರೈತರು ಕೃಷಿ ಹೊಂಡ, ಪಾಲಿಥೀನ್ ಹೊದಿಕೆ ಹಾಗೂ ತಂತಿ ಬೇಲಿ ಘಟಕಗಳನ್ನು ಕಡ್ಡಾಯವಾಗಿ ಅನುಷ್ಠಾನ ಮಾಡುವುದು. ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಯೋಜನೆಯ ಮಾರ್ಗಸೂಚಿಯನ್ವಯ ಘಟಕಗಳ ತಾಂತ್ರಿಕ ನಿರ್ದಿಷ್ಟತೆಯನ್ನು (Specifications) ಪರಿಶೀಲಿಸಿ ಹಾಗೂ ದೃಢೀಕರಿಸಿ ಎಲ್ಲಾ ಅಂಶಗಳನ್ನು ತಂತ್ರಾಂಶದಲ್ಲಿ ಅಳವಡಿಸಿದ ನಂತರ ಸಹಾಯಧನ ಬಿಡುಗಡೆ ಮಾಡುವುದು. ತಂತ್ರಾಂಶದಲ್ಲಿ ನಮೂದಿಸದೇ, ಯಾವುದೇ ಘಟಕಕ್ಕೆ ವೆಚ್ಚ ಭರಿಸಲು ಅವಕಾಶವಿರುವುದಿಲ್ಲ.

## 4. ಕೃಷಿ ಭಾಗ್ಯ ಯೋಜನೆಯಡಿ ಘಟಕಗಳ ಅನುಷ್ಠಾನದ ವಿವರಗಳು:

### 4.1 ಕ್ಷೇತ್ರಬದು ನಿರ್ಮಾಣ:

ರೈತರ ಜಮೀನಿನಲ್ಲಿ ಬಿದ್ದ ಮಳೆ ನೀರನ್ನು ಪೋಲಾಗದಂತೆ ಅದೇ ಜಮೀನಿನಲ್ಲಿ ಇಂಗಿಸಲು ಹಾಗೂ ಕೃಷಿ ಹೊಂಡದಲ್ಲಿ ಸಂಗ್ರಹಿಸಲು ಅನುವಾಗುವಂತೆ ರೈತರ ಜಮೀನಿನಲ್ಲಿ ಕ್ಷೇತ್ರ ಬದು ನಿರ್ಮಾಣ ಮಾಡುವುದು. ಬದು ನಿರ್ಮಾಣವನ್ನು ಕ್ಷೇತ್ರ ಬದು/ ಕಂದಕ ಬದು ನಿರ್ಮಾಣದ ರೀತಿಯಲ್ಲಿ ನಿರ್ಮಿಸುವುದು.

**ಸೂಚನೆ:**

- ಇತರೆ ಯೋಜನೆಗಳಡಿ ಅವಕಾಶವಿಲ್ಲದಿದ್ದಲ್ಲಿ ಮಾತ್ರ ಕೃಷಿ ಭಾಗ್ಯ ಯೋಜನೆಯಡಿ ರೈತರು ಕ್ಷೇತ್ರ ಬದು ನಿರ್ಮಿಸಿಕೊಳ್ಳಬಹುದಾಗಿದೆ. ಸದರಿ ಘಟಕಕ್ಕೆ ಸಾಮಾನ್ಯ ರೈತರಿಗೆ ಶೇ.80 ಹಾಗೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ವರ್ಗದ ರೈತರಿಗೆ ಶೇ.90 ರ ಸಹಾಯಧನ ನೀಡುವುದು.
- ಕೃಷಿ ಭಾಗ್ಯ ಯೋಜನೆಯಡಿ, ಕ್ಷೇತ್ರ ಬದು ನಿರ್ಮಿಸಿದ ನಂತರ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ಅಳತೆ ಪುಸ್ತಕದಲ್ಲಿ ನಮೂದಿಸಿ ಸ್ಥಳ ಪರಿಶೀಲನೆಯನ್ನು K-KISAN Mobile Appನ Post Inspection ತಂತ್ರಾಂಶದಲ್ಲಿ ನಡೆಸಿ, ಅಳತೆ ಪುಸ್ತಕದ ಸಂಖ್ಯೆ/ಪುಟ ಸಂಖ್ಯೆಯನ್ನು K-KISAN Mobile ತಂತ್ರಾಂಶದಲ್ಲಿ ನಮೂದಿಸುವುದು.

### 4.2 ನೀರನ್ನು ಸಂಗ್ರಹಿಸಲು ಕೃಷಿ ಹೊಂಡ (ನೀರು ಸಂಗ್ರಹಣಾ ರಚನೆ):

ಮಳೆ ನೀರು ಸಂಗ್ರಹಣೆಗೆ ಎಲ್ಲಾ ರೀತಿಯ ಮಣ್ಣುಗಳಲ್ಲಿ ಕೃಷಿ ಹೊಂಡ ರಚನೆ ಅನುಕೂಲಕರವಾಗಿರುತ್ತದೆ. ಉಪಚರಿಸಲ್ಪಟ್ಟ ಕೃಷಿ ಯೋಗ್ಯ ಜಮೀನಿನಿಂದ ದಾರಿಗಳಲ್ಲಿ ಹರಿಯುವ ಹೆಚ್ಚುವರಿ ಮಳೆಯ ನೀರನ್ನು ಆಯ್ದ ಸ್ಥಳದಲ್ಲಿ ಹೊಂಡ ತೆಗೆದು ಜಲ ಸಂಗ್ರಹಣೆಯನ್ನು ಮಾಡಬಹುದಾಗಿದೆ. ಸಂಗ್ರಹಣೆಯಾದ ಮಳೆ ನೀರನ್ನು ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿಗಾಗಿ ಬಳಸಿಕೊಳ್ಳಬಹುದಾಗಿದೆ. ಮಳೆ ವಿಫಲವಾದಾಗ, ಕೃಷಿ ಹೊಂಡದಲ್ಲಿ 250 ಘ.ಮೀ ನೀರು ಶೇಖರಣೆ ಆಗಿದ್ದರೆ, ಸೂಕ್ಷ್ಮ (ತುಂತುರು/ಹನಿ) ನೀರಾವರಿಯಿಂದ 1 ಹೆ. ಪ್ರದೇಶದಲ್ಲಿ ಬೆಳೆದ ಬೆಳೆಗೆ ಒಮ್ಮೆ ರಕ್ಷಣಾತ್ಮಕ ನೀರಾವರಿಯನ್ನು ನೀಡಬಹುದಾಗಿರುತ್ತದೆ.

ಮಣ್ಣಿನ ವಿಧದ ಅನುಸಾರ ನೀರು ಸಂಗ್ರಹಣಾ ಕ್ರಮಗಳ ವಿವಿಧ ರಚನೆಗಳ ಗಾತ್ರ ಹಾಗೂ ಘಟಕ ವೆಚ್ಚದನ್ವಯ ಸಾಮಾನ್ಯ ರೈತರಿಗೆ ಶೇ.80 ಹಾಗೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ವರ್ಗದ ರೈತರಿಗೆ ಶೇ.90 ರ ಸಹಾಯಧನ ನೀಡುವುದು.

ಆಳವಾದ ಕಪ್ಪು ಮಣ್ಣು ಪ್ರದೇಶದಲ್ಲಿ ಕೃಷಿ ಹೊಂಡಗಳಿಗೆ ಪಾಲಿಥೀನ್ ಹೊದಿಕೆ ಅಳವಡಿಸುವುದು ಕಡ್ಡಾಯವಿಲ್ಲದಿರುವುದರಿಂದ ಇಂತಹ ಪ್ರದೇಶದಲ್ಲಿ ರೈತರು 21*21*3 ಮೀಟರ್ ಅಳತೆ ಕೃಷಿ ಹೊಂಡ ನಿರ್ಮಿಸಲು ಆದ್ಯತೆ ನೀಡುವುದು.

**ಕೃಷಿ ಹೊಂಡದ ವಿನ್ಯಾಸವು**

1. ಕೃಷಿ ಹೊಂಡದ ಒಳ ಅಳತೆ ಹಾಗೂ ಕೃಷಿ ಹೊಂಡದ ಸುತ್ತಲಿನ ಬದು ನಿರ್ಮಾಣ (ಬರ್ಮ್)
2. ಪೈಪ್ ಇನ್‌ಲೆಟ್ (Silt trap)- ಔಟ್‌ಲೆಟ್ ಗಳನ್ನು ಒಳಗೊಂಡಿರುತ್ತದೆ.

**ಅನುಷ್ಠಾನ ವಿಧಾನ:**

1. **ಕೃಷಿ ಹೊಂಡ ನಿರ್ಮಿಸಲು ಸ್ಥಳದ ಆಯ್ಕೆ:** ಜಮೀನಿನ ಇಳಿಜಾರಿಗೆ ಸೂಕ್ತವಾಗಿ ಕೃಷಿ ಹೊಂಡ ನಿರ್ಮಿಸಲು ಸ್ಥಳ ಆಯ್ಕೆ ಮಾಡುವುದು.
2. **ರೈತರು ಸ್ವತಃ ಕೃಷಿ ಹೊಂಡ ನಿರ್ಮಿಸಿಕೊಳ್ಳುವುದು**. ಕೃಷಿ ಹೊಂಡ ನಿರ್ಮಾಣವನ್ನು ಸಂಪೂರ್ಣವಾಗಿ ಹಾಗೂ ಅಚ್ಚುಕಟ್ಟಾಗಿ ನಿರ್ಮಾಣ ಮಾಡಿರುವ ಬಗ್ಗೆ ಸ್ಥಳೀಯ ಇಲಾಖಾ ಅಧಿಕಾರಿಗಳು ಅಳತೆ ತಪಾಸಣೆ (CMR) ದೃಢೀಕರಿಸಿ, ಸಹಾಯಧನವನ್ನು ಅನುದಾನ ಪಾವತಿ ವಿಧಾನದನ್ವಯ (ಎರಡು ಕಂತುಗಳಲ್ಲಿ) ನೇರವಾಗಿ ರೈತರ ಖಾತೆಗೆ ವರ್ಗಾಯಿಸುವುದು.

3. **ಪೈಪ್ ಇನ್‌ಲೆಟ್-ಔಟ್‌ಲೆಟ್:** ಕೃಷಿ ಹೊಂಡ ಪೈಪ್ ಇನ್‌ಲೆಟ್- ಔಟ್‌ಲೆಟ್‌ಗೆ ಪರ್ಯಾಯ ವಿಧಗಳನ್ನು ಜಲಾನಯನ ಇಲಾಖೆಯಿಂದ ನೀಡಲಾಗಿದೆ. ಇದರಲ್ಲಿ ಯಾವುದಾದರೂ ಒಂದು ವಿಧವನ್ನು ರೈತರು ಅಳವಡಿಸಿಕೊಳ್ಳಬಹುದಾಗಿದೆ. ವಿವರ ಕೆಳಕಂಡಂತಿದೆ :
   1. ಪೈಪ್ ಇನ್‌ಲೆಟ್- ಔಟ್‌ಲೆಟ್‌ಗೆ ಸಂಬಂಧಿಸಿದಂತೆ 7.5 ಮೀ ಉದ್ದದ NP2 RCC ಪೈಪ್ ಅಳವಡಿಸುವ ಬಗ್ಗೆ ತಿಳಿಸಲಾಗಿದೆ.
   2. NP2 RCC ಪೈಪ್ 2.5 ಮೀ ಉದ್ದದ 3 ಪೈಪ್‌ಗಳನ್ನು (7.5ಮೀ) ಅಳವಡಿಸುವ ಬದಲಿಗೆ, ಸಿಲ್ಟ್ ಟ್ರಾಪ್ ಅನ್ನು ಬದುವಿನ ಮಧ್ಯದಲ್ಲಿ ನಿರ್ಮಿಸುವುದರಿಂದ 2.5 ಮೀ ನ ಒಂದೇ ಪೈಪ್ ಅನ್ನು ಅಳವಡಿಸಬಹುದಾಗಿರುತ್ತದೆ.

(**ಷರಾ:** PVC ಪೈಪ್‌ಗಳನ್ನು Inlet –Outlet ಗಳಿಗೆ ಬಳಸಬಹುದಾಗಿರುತ್ತದೆ (PVC ಪೈಪ್ SR ಅನುಗುಣವಾಗಿ ಬಿಲ್ ತಯಾರಿಸುವುದು). ಆದರೆ ಪೈಪ್‌ಗಳ ಮೇಲೆ ಹೆಚ್ಚು ಮಣ್ಣಿನ ಒತ್ತಡ ಹಾಕಬಾರದು. ರೈತರು ನಿರ್ವಹಣೆ ಮಾಡಬೇಕು)

- ರೈತರು ಕೃಷಿ ಹೊಂಡ ಮತ್ತು Silt trap ಅನ್ನು ನಿರ್ಮಿಸಿಕೊಂಡ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ಅಳತೆ ಪುಸ್ತಕದಲ್ಲಿ ನಮೂದಿಸಿ ಸ್ಥಳ ಪರಿಶೀಲನೆಯನ್ನು K-KISAN Mobile Appನ Post Inspection ತಂತ್ರಾಂಶದಲ್ಲಿ ನಡೆಸಿ, ಅಳತೆ ಪುಸ್ತಕದ ಸಂಖ್ಯೆ/ಪುಟ ಸಂಖ್ಯೆಯನ್ನು K-KISAN Mobile ತಂತ್ರಾಂಶದಲ್ಲಿ ನಮೂದಿಸುವುದು.
- ಕೆಂಪು / ಕಪ್ಪು ಮಣ್ಣಿನ ವಿವಿಧ ಅಳತೆಯ ಕೃಷಿ ಹೊಂಡಗಳ 2018-19 ದರಸೂಚಿಯನ್ವಯ ಅನುಮೋದಿತ ದರ ಈ ಕೆಳಗಿನಂತಿದೆ.

| ಕ್ರ ಸಂ | ಕೃಷಿ ಹೊಂಡದ ಅಳತೆ | ಒಟ್ಟು ಮೊತ್ತ (ರೂಗಳಲ್ಲಿ) | | ಸಾಮಾನ್ಯ (ಶೇ. 80 ರ ಸಹಾಯಧನ) (ರೂಗಳಲ್ಲಿ) | | ಪ.ಜಾತಿ/ ಪ. ಪಂ (ಶೇ. 90 ರ ಸಹಾಯಧನ) (ರೂಗಳಲ್ಲಿ) | |
|---|---|---|---|---|---|---|---|
| | | ಕೆಂಪು ಮಣ್ಣು | ಕಪ್ಪು ಮಣ್ಣು | ಕೆಂಪು ಮಣ್ಣು | ಕಪ್ಪು ಮಣ್ಣು | ಕೆಂಪು ಮಣ್ಣು | ಕಪ್ಪು ಮಣ್ಣು |
| 1 | 10*10*3 | 22659.00 | 20085.00 | 18127.20 | 16068.00 | 20393.10 | 18076.50 |
| 2 | 12*12*3 | 28310.00 | 24813.00 | 22648.00 | 19850.40 | 25479.00 | 22331.70 |
| 3 | 15*15*3 | 42193.00 | 38901.00 | 33754.40 | 31120.80 | 37973.70 | 35010.90 |
| 4 | 18*18*3 | 56380.00 | 49493.00 | 45104.00 | 39594.40 | 50742.00 | 44543.70 |
| 5 | 21*21*3 | 79073.00 | 70690.00 | 63258.40 | 56552.00 | 71165.70 | 63621.00 |

**ಷರಾ:** ಮಣ್ಣಿನ ವಿಧ, ಕೃಷಿ ಹೊಂಡದ ಅಳತೆ ಹಾಗೂ ಪರಿಷ್ಕೃತ ದರಪಟ್ಟಿಯನ್ವಯ ಘಟಕ ವೆಚ್ಚ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ.

## 4.3 ಪಾಲಿಥೀನ್ ಹೊದಿಕೆ:

ಕೃಷಿ ಹೊಂಡದಲ್ಲಿ ಸಂಗ್ರಹಣೆಯಾದ ನೀರು ಇಂಗಿ ಹೋಗದಂತೆ ತಡೆಗಟ್ಟಲು ಕೆಂಪು ಮಣ್ಣಿನಲ್ಲಿ ನಿರ್ಮಿಸಲಾದ ಕೃಷಿ ಹೊಂಡಕ್ಕೆ ಪಾಲಿಥೀನ್ ಹೊದಿಕೆ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಆಳವಾದ ಕಪ್ಪು ಮಣ್ಣಿನಲ್ಲಿ ಸದರಿ ಘಟಕವು ಕಡ್ಡಾಯವಿರುವುದಿಲ್ಲ (ರೈತರ ಅವಶ್ಯಕತೆಗನುಗುಣವಾಗಿ ಒದಗಿಸಿಕೊಡಲು ಅವಕಾಶ ಕಲ್ಪಿಸಿದೆ). ಸದರಿ ಘಟಕಕ್ಕೆ ಸಾಮಾನ್ಯ ರೈತರಿಗೆ ಶೇ.80 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ರೈತರಿಗೆ ಶೇ.90 ರ ಸಹಾಯಧನ ನೀಡುವುದು. ಯೋಜನೆಯಡಿ ಅನುಮೋದಿತ ಸಂಸ್ಥೆಗಳಿಂದ ಘಟಕ ಅನುಷ್ಠಾನ ಮಾಡಿದ ನಂತರ, ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಅಳತೆ ತಪಾಸಣೆಯನ್ನು ಕೈಗೊಂಡು ಗುಣಮಟ್ಟವನ್ನು ಪರಿಶೀಲಿಸಿ, ಸೂಕ್ತ ದಾಖಲಾತಿಗಳನ್ನು ಪಡೆದ ನಂತರ ಸಂಸ್ಥೆಗೆ ನಿಯಮಾನುಸಾರ ಮೊತ್ತ ಪಾವತಿಸುವುದು.

**ವಿಶೇಷ ಸೂಚನೆ:**

1. ಕೃಷಿ ಹೊಂಡಕ್ಕೆ ಅಳವಡಿಸುವ ಪಾಲಿಥಿನ್ ಹೊದಿಕೆಯ ಘಟಕ ವೆಚ್ಚವನ್ನುದರ ನಿಗದಿಪಡಿಸಿದ ನಂತರ ನೀಡಲಾಗುವುದು
2. Schedule of Rates ಪರಿಷ್ಕರಣೆಯಾದಲ್ಲಿ ಪರಿಷ್ಕೃತ ದರಗಳನ್ನು ಅನುಸರಿಸುವುದು. ಘಟಕವನ್ನು GPS Co-ordinates ಸಹಿತ ಛಾಯಾಚಿತ್ರ ಕಡ್ಡಾಯವಾಗಿರುತ್ತದೆ.

**ಕೃಷಿ ಹೊಂಡಕ್ಕೆ ಅಳವಡಿಸುವ ಪಾಲಿಥಿನ್ ಹೊದಿಕೆಯ ಘಟಕಗಳ ವಿವರ (Specification):**

<table>
<tr><th>ಕ್ರ.ಸಂ.</th><th>ಕೃಷಿ ಹೊಂಡದ ಗಾತ್ರ (ಮೀ.ನಲ್ಲಿ)</th><th>ಅನುಮೋದಿತ ಪಾಲಿಥೀನ್ ಹೊದಿಕೆಯ Specification</th></tr>
<tr><td>1</td><td>10*10*3</td><td rowspan="3">250 GSM (250 Microns-Type-1) ಅಥವಾ 420 GSM (500 Microns-Type-2) Specificationವುಳ್ಳ ಪಾಲಿಥೀನ್ ಹೊದಿಕೆಯನ್ನು ಬಳಸಲು ಅವಕಾಶವಿರುತ್ತದೆ.</td></tr>
<tr><td>2</td><td>12*12*3</td></tr>
<tr><td>3</td><td>15*15*3</td></tr>
<tr><td>4</td><td>18*18*3</td><td rowspan="2">ಕಡ್ಡಾಯವಾಗಿ 420 GSM (500 Microns-Type-2) Specification ವುಳ್ಳ ಪಾಲಿಥೀನ್ ಹೊದಿಕೆಯನ್ನು ಬಳಸುವುದು.</td></tr>
<tr><td>5</td><td>21*21*3</td></tr>
</table>

ಕೃಷಿ ಭಾಗ್ಯ ಯೋಜನೆಯಡಿ ನಿರ್ಮಿಸಲಾಗಿರುವ ಕೃಷಿ ಹೊಂಡಗಳಿಗೆ ಬಳಸುತ್ತಿರುವ ಹೊದಿಕೆ HDPE 250/500 micron Geo membrane Poly Sheetಗಳ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲು ಪಾಲಿಥೀನ್ ಹೊದಿಕೆಯ ಮಾದರಿಯನ್ನು ತೆಗೆದು CIPET (BIS recognized) ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸುವುದು ಹಾಗೂ ವಿಶ್ಲೇಷಣಾ ಶುಲ್ಕವನ್ನು ಆಡಳಿತಾತ್ಮಕ ವೆಚ್ಚ (059) ಘಟಕದಡಿ ಭರಿಸುವುದು ಮತ್ತು ವಿಶ್ಲೇಷಣಾ ವರದಿಯನ್ನು ಪಡೆದು ಕೇಂದ್ರ ಕಛೇರಿಗೆ ಸಲ್ಲಿಸುವುದು.

**ಪಾಲಿಥೀನ್ ಹೊದಿಕೆ ಸಂಬಂಧ ಈ ಕೆಳಕಂಡ ಅಂಶಗಳನ್ನು ಪಾಲಿಸುವುದು**

- ಪಾಲಿಥೀನ್ ಹೊದಿಕೆ ಅನುಮೋದಿತ ಎಲ್ಲಾ ಸಂಸ್ಥೆಗಳು ಎಲ್ಲಾ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತವೆ.
- ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ ಸಹಾಯಕ ಕೃಷಿ ಅಧಿಕಾರಿ ಹಾಗೂ ಸಂಸ್ಥೆಯ ಪ್ರತಿನಿಧಿಗಳು ಸಮಾಲೋಚಿಸಿ, ಜಂಟಿ ಸಮೀಕ್ಷೆ ಕೈಗೊಂಡು ತಾಂತ್ರಿಕತೆಯನುಸಾರ ನಿರ್ಮಿಸಿರುವುದರ ಬಗ್ಗೆ ಖಾತರಿಪಡಿಸಿಕೊಂಡು (Slope, Smoothening, Anchor Trench Formation, Inlet-Outlet) ಹಾಗು ತಾಂತ್ರಿಕವಾಗಿ ಸರಿ ಇರದ/ ಪೂರ್ಣಗೊಳ್ಳದ ಕೃಷಿ ಹೊಂಡಗಳನ್ನು ಸ್ಥಳದಲ್ಲಿಯೇ ಸರಿಪಡಿಸಲು ಕ್ರಮ ವಹಿಸುವುದು.
- ಕ್ಷೇತ್ರ ಪರಿಶೀಲನೆಯಲ್ಲಿ ತಾಂತ್ರಿಕವಾಗಿ ಪೂರ್ಣಗೊಂಡಿರುವ ಕೃಷಿ ಹೊಂಡಗಳ ಪಟ್ಟಿ ಹಾಗೂ ರೈತರ ವಂತಿಕೆ ನೀಡಿರುವ ಪಟ್ಟಿಯನ್ನು ಸಹಾಯಕ ಕೃಷಿ ನಿರ್ದೇಶಕರು **ನಮೂನೆ-2A** ರಲ್ಲಿ ಕೂಡಲೇ ಸಂಸ್ಥೆಗಳಿಗೆ ನೀಡುವುದು.
- ಸಂಸ್ಥೆಯಿಂದ ಪಾಲಿಥೀನ್ ಹೊದಿಕೆಯನ್ನು ಅಳವಡಿಸಿದ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ಸ್ಥಳ ಪರಿಶೀಲನೆಯನ್ನು K-KISAN Mobile Appನ Post Inspection ತಂತ್ರಾಂಶದಲ್ಲಿ ನಡೆಸಿ, Secondary QR Code (Alias Number) ಸಂಖ್ಯೆಯನ್ನು K-KISAN Mobile ತಂತ್ರಾಂಶದಲ್ಲಿ ನಮೂದಿಸುವುದು.

**ನಮೂನೆ-2A**ದಿನಾಂಕ:

| ಕ್ರ. ಸಂ. | ರೈತರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಪೂರ್ಣಗೊಂಡಿರುವ ಕೃಷಿ ಹೊಂಡದ ಅಳತೆ | ಸರಬರಾಜು ಸಂಸ್ಥೆ | ರೈತರ ವಂತಿಕೆ | RTGS ವಿವರ (UTR ಸಂಖ್ಯೆ /ದಿನಾಂಕ) |
|---|---|---|---|---|---|---|---|---|
| | | | | | | | | |
| | | | | | | | | |

ಸಹಿ/-

ಸಹಾಯಕ ಕೃಷಿ ನಿರ್ದೇಶಕರು

- ಸಂಸ್ಥೆಗಳು, ಕೃಷಿ ಹೊಂಡಗಳಿಗೆ ಪಾಲಿಥೀನ್ ಹೊದಿಕೆಯನ್ನು 5 ಕಾರ್ಯ ನಿರ್ವಹಿಸುವ ದಿವಸಗಳೊಳಗಾಗಿ ಪೂರ್ಣಗೊಳಿಸಿ **ನಮೂನೆ-2B** ರಲ್ಲಿ ಸಹಾಯಕ ಕೃಷಿ ನಿರ್ದೇಶಕರಿಗೆ ರೈತರ ದೃಢೀಕರಣ, ಸಾಲದ ಬಿಲ್ಲು (Credit Bill) / Installation Certificate/ ವಾರಂಟಿಯೊಂದಿಗೆ ಸಲ್ಲಿಸುವುದು.

**ನಮೂನೆ-2B** ದಿನಾಂಕ:

| **ಕ್ರ. ಸಂ.** | ಪಾಲಿಥೀನ್ ಹೊದಿಕೆ ಪೂರ್ಣಗೊಂಡಿರುವ ರೈತರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಸಾಲದ ಬಿಲ್ಲಿನ ಸಂಖ್ಯೆ | **ವಾರಂಟಿ**/ Installation Certificate | ರೈತರ ದೃಢೀಕರಣ ಪ್ರತಿ |
|---|---|---|---|---|---|---|---|
| | | | | | | | |
| | | | | | | | |

ಸಹಿ/-

ಸಂಸ್ಥೆ ಪ್ರತಿನಿಧಿ

- ಸಹಾಯಕ ಕೃಷಿ ನಿರ್ದೇಶಕರು ವರದಿಯನ್ನು ಪಡೆದು ದೃಡೀಕರಿಸಿ 3 ಕಾರ್ಯ ನಿರ್ವಹಿಸುವ ದಿನಗಳೊಳಗಾಗಿ ಸಾಲದ ಬಿಲ್ಲುಗಳನ್ನು ತಯಾರಿಸಿ, ಡಿ.ಸಿ ಬಿಲ್ಲುಗಳನ್ನು K-KISAN ತಂತ್ರಾಂಶದಲ್ಲಿ ತಯಾರಿಸಿ ಮೇಲು ಸಹಿಗೆ ಉಪ ಕೃಷಿ ನಿರ್ದೇಶಕರಿಗೆ **ನಮೂನೆ-2C** ರಲ್ಲಿ ಸಲ್ಲಿಸುವುದು.

**ನಮೂನೆ-2C** ದಿನಾಂಕ:

| **ಕ್ರ. ಸಂ.** | ಪಾಲಿಥೀನ್ ಹೊದಿಕೆ ಪೂರ್ಣಗೊಂಡಿರುವ ರೈತರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮ | ಸಾಲದ ಬಿಲ್ಲಿನ ವಿವರ ಹಾಗೂ ಸಂಖ್ಯೆ | **ವಾರಂಟಿ**/ Installation Certificate | ರೈತರ ದೃಢೀಕರಣ ಪ್ರತಿ |
|---|---|---|---|---|---|---|---|
| | | | | | | | |
| | | | | | | | |

ಸಹಿ/-

ಸಹಾಯಕ ಕೃಷಿ ನಿರ್ದೇಶಕರು

- ಉಪ ಕೃಷಿ ನಿರ್ದೇಶಕರು ಬಿಲ್ಲುಗಳನ್ನು ಸ್ವೀಕರಿಸಿದ 2 ದಿವಸಗಳೊಳಗಾಗಿ ಪರಿಶೀಲಿಸಿ K-KISAN ತಂತ್ರಾಂಶದಲ್ಲಿ ಡಿ.ಸಿ.ಬಿಲ್ಲು ಮೇಲು ಸಹಿ ಮಾಡಿ ಸಹಾಯಕ ಕೃಷಿ ನಿರ್ದೇಶಕರಿಗೆ ರವಾನಿಸುವುದು.

## ಅನುಬಂಧ-2

## ಪಾಲಿಥೀನ್ ಹೊದಿಕೆ- ಒಪ್ಪಿಗೆ ಪತ್ರ ಮತ್ತು ಹಣ ಸಂದಾಯ ರಸೀದಿ

-------ತಾಲ್ಲೂಕು, ------ ಹೋಬಳಿ, ................................................ ಗ್ರಾಮದ ಶ್ರೀ/ಶ್ರೀಮತಿ ನಾನು FID/ಆದಾರ್ ಸಂಖ್ಯೆ.................... ..........................................................., ಕಾರ್ಯಾದೇಶ ಸಂಖ್ಯೆ.......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ __________ ಅಳತೆಯ ಕೃಷಿ ಹೊಂಡಕ್ಕೆ ________ micron/ GSM **ಪಾಲಿಥೀನ್ ಹೊದಿಕೆ**ಯನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಸಹಾಯಧನ ರೂ._______ಗಳನ್ನು (ಅಕ್ಷರಗಳಲ್ಲಿ___________) ____________________, ಸಂಸ್ಥೆಯವರಿಗೆ ನೇರವಾಗಿ ವರ್ಗಾವಣೆ ಮಾಡಲು ಒಪ್ಪಿರುತ್ತೇನೆ. HDPE ಪಾಲಿಥೀನ್ ಹೊದಿಕೆ, Invoice No,___________ , Invoice ದಿನಾಂಕ___________

ಸ್ಥಳ :

ದಿನಾಂಕ ರೈತರ ಸಹಿ

## ಪಾಲಿಥೀನ್ ಹೊದಿಕೆ ತೃಪ್ತಿಕರ ಪ್ರಮಾಣ ಪತ್ರ

----- ತಾಲ್ಲೂಕು ------ ಹೋಬಳಿ,_________________ಗ್ರಾಮದ ಶ್ರೀ/ ಶ್ರೀಮತಿ ____________________________ಆದ ನಾನು FID/ಆದಾರ್ ಸಂಖ್ಯೆ.................... ..........................................................., ಕಾರ್ಯಾದೇಶ ಸಂಖ್ಯೆ.......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ____________ಅಳತೆಯ ಕೃಷಿ ಹೊಂಡ ನಿರ್ಮಿಸಿದ್ದು, ------------------ --------- ಸಂಸ್ಥೆಯವರು ________ micron/GSM ಪಾಲಿಥೀನ್ ಹೊದಿಕೆಯನ್ನು ಅಳವಡಿಸಿರುತ್ತಾರೆ. ಸದರಿ ಪಾಲಿಥೀನ್ ಅಳವಡಿಕೆಯು ತೃಪ್ತಿಕರವಾಗಿರುತ್ತದೆಂದು ದೃಢೀಕರಿಸಿರುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ:

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>----- ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------- ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>------- ತಾಲ್ಲೂಕು |

## 4.4 ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing):

ಆಕಸ್ಮಿಕ ಅವಘಡಗಳನ್ನು ತಪ್ಪಿಸಲು ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ಹಾಗೂ ಕೃಷಿ ಹೊಂಡದ ಸುತ್ತಲೂ ನೆರಳು ಪರದೆ **(Shadenet)** ಅಳವಡಿಸುವುದು. K-KISAN ತಂತ್ರಾಂಶದಲ್ಲಿ ರೈತರ ನೋಂದಣಿ ಮಾಡುವಾಗ **ಅನುಬಂಧ-3A** ನಲ್ಲಿ ರೈತರಿಂದ ದೃಢೀಕರಿಸಿ ತಂತ್ರಾಂಶದಲ್ಲಿ ಕಡ್ಡಾಯವಾಗಿ Upload ಮಾಡುವುದು.

ಮುಂದುವರೆದು, ಸದರಿ ಘಟಕವನ್ನು ಅಳವಡಿಸಿದಲ್ಲಿ ಕೃಷಿ ಹೊಂಡಕ್ಕೆ ಹಾಕಿರುವ ಪಾಲಿಥೀನ್ ಹೊದಿಕೆಯನ್ನು ಬಿಸಿಲಿನಿಂದ ಹಾಳಾಗುವುದನ್ನು ತಡೆಗಟ್ಟಬಹುದು ಎಂದು ಸಹ ತಿಳಿಸಿ, ರೈತರಿಗೆ ಸದರಿ ಘಟಕವನ್ನು ಅಳವಡಿಸುವ ಕುರಿತು ಉತ್ತೇಜನ ನೀಡುವುದು.

ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ಹಾಗೂ ನೆರಳು ಪರದೆ **(Shadenet)** ಅಳವಡಿಸಲು, ಕೃಷಿ ಹೊಂಡದ ಅಳತೆಗೆ ಬೇಕಾಗುವ ಅಂದಾಜು ಮೊತ್ತದ ಶೇ 40 ಸಹಾಯಧನವನ್ನು ಸಾಮಾನ್ಯ ಮತ್ತು ಶೇ 50 ಪ.ಜಾ/ಪ.ಪಂ ರೈತರಿಗೆ ಪಾವತಿಸುವುದು. ನೆರಳು ಪರದೆಯನ್ನು **(Shadenet)** ರೈತರು ಮಾರುಕಟ್ಟೆಯಲ್ಲಿ ಖರೀದಿ ಮಾಡಿ ನಿಗದಿಪಡಿಸಿದ ವಿನ್ಯಾಸದ (design) ಪ್ರಕಾರ ಕೃಷಿ ಹೊಂಡದ ಸುತ್ತಲೂ ನೆರಳು ಪರದೆ ಅಳವಡಿಸುವುದು.

**ಸೂಚನೆ:** ತಂತಿ ಬೇಲಿ ಹಾಗೂ ನೆರಳು ಪರದೆ ಘಟಕದ ವೆಚ್ಚವನ್ನು ಪರಿಷ್ಕೃತ ದರಪಟ್ಟಿಯನ್ವಯ ನೀಡಲಾಗುವುದು ಹಾಗೂ ಅದರಂತೆ ಕ್ರಮವಹಿಸಲು ಸೂಚಿಸಿದೆ

ರೈತರು ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ಹಾಗೂ ನೆರಳು ಪರದೆ ಘಟಕವನ್ನು ಅಳವಡಿಸಿಕೊಂಡ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ರೈತರ ಕ್ಷೇತ್ರಕ್ಕೆ ಭೇಟಿ ನೀಡಿ, ಅನುಷ್ಠಾನವಾಗಿರುವ ಬಗ್ಗೆ ಪರಿಶೀಲಿಸಿ, ಪೂರ್ಣಗೊಳಿಸಿರುವ ಬಗ್ಗೆ ಖಚಿತಪಡಿಸಿ ಅಳತೆ ಪುಸ್ತಕದಲ್ಲಿ ನಮೂದಿಸಿ ಸ್ಥಳ ಪರಿಶೀಲನೆಯನ್ನು K-KISAN Mobile Appನ Post Inspection ತಂತ್ರಾಂಶದಲ್ಲಿ ಮಾಡುವುದು.

K-KISAN Mobile ತಂತ್ರಾಂಶದಲ್ಲಿ photo ದಾಖಲೀಕರಣ/ ಅಳತೆ ಪುಸ್ತಕದ ಸಂಖ್ಯೆ/ಪುಟ ಸಂಖ್ಯೆಯನ್ನು ನಮೂದಿಸುವುದು. ನಂತರ ಅಳತೆಗನುಗುಣವಾಗಿ ನಿರ್ದಿಷ್ಟ ಸಹಾಯಧನವನ್ನು ರೈತರಿಗೆ ಪಾವತಿಸುವುದು ಹಾಗೂ **ಅನುಬಂಧ-3B** ರಲ್ಲಿ ರೈತರಿಂದ ಸಹಾಯಧನಸ್ವೀಕೃತಿ ಕುರಿತು ದೃಢೀಕರಣ ಪಡೆಯುವುದು .

## ಅನುಬಂಧ-3A

## ರೈತರ ಸ್ವಯಂ ಘೋಷಣೆ

------ತಾಲ್ಲೂಕು, ------ ಹೋಬಳಿ, ......................................... ಗ್ರಾಮದ ರೈತನಾದ ಶ್ರೀ/ಶ್ರೀಮತಿ .............................................................../ ........................................................................ ನಾನು FID/ಆದಾರ್ ಸಂಖ್ಯೆ..................... ........................................................., ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ನಿರ್ಮಿಸಿಕೊಳ್ಳುವ ಕೃಷಿ ಹೊಂಡದಲ್ಲಿ ಯಾವುದೇ ಜಾನುವಾರು/ ಜನರು ಆಕಸ್ಮಿಕವಾಗಿ ಬಿದ್ದು ಅವಘಡಗಳು/ ಪ್ರಾಣ ನಷ್ಟ ಸಂಭವಿಸದಂತೆ ತಡೆಯಲು ಕಡ್ಡಾಯವಾಗಿ ತಂತಿ ಬೇಲಿ ಹಾಗೂ ನೆರಳು ಪರದೆ ಘಟಕವನ್ನು ಅಳವಡಿಸಿಕೊಳ್ಳುತ್ತೇನೆ ಹಾಗೂ ನಿರ್ವಹಿಸುತ್ತೇನೆ ಎಂದು ಈ ಮೂಲಕ ಘೋಷಿಸುತ್ತೇನೆ.

ಇಲ್ಲವಾದಲ್ಲಿ, ಸದರಿ ಕೃಷಿ ಹೊಂಡದಲ್ಲಿ ಸಂಭವಿಸುವ ಆಕಸ್ಮಿಕ ಅವಘಡಗಳಿಗೆ ನಾನೇ ನೇರ ಹೊಣೆಗಾರನಾಗಿರುತ್ತೇನೆ. ಸದರಿ ಅವಘಡಗಳಿಗೆ ಕೃಷಿ ಇಲಾಖೆಯು ಯಾವುದೇ ರೀತಿಯಿಂದಲೂ ಹೊಣೆಯಾಗಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ: ವಿಳಾಸ: ................................

## ಅನುಬಂಧ-3B

## *ತಂತಿ ಬೇಲಿ/ ನೆರಳು ಪರದೆ ಹಣ ಸ್ವೀಕೃತಿ ರಸೀದಿ*

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ................................................................/......................................................................... ನಾನು FID/ಆದಾರ್ ಸಂಖ್ಯೆ.................... ..........................................................., ಕಾರ್ಯಾದೇಶ ಸಂಖ್ಯೆ........................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ------ *ತಂತಿಬೇಲಿ ಹಾಗೂ ನೆರಳು ಪರದೆ*ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಸಹಾಯಧನ ರೂ. ------/-ಗಳನ್ನು ಕೃಷಿ ಇಲಾಖೆಯಿಂದ ಪಡೆದಿರುತ್ತೇನೆ ಎಂದು ದೃಢೀಕರಿಸಿರುತ್ತೇನೆ

Invoice ಸಂಖ್ಯೆ:_____________, ದಿನಾಂಕ___________ ಸಂಸ್ಥೆ: ___________

ಸ್ಥಳ: ರೈತರ ಸಹಿ

ದಿನಾಂಕ:

| ಸಹಾಯಕ ಕೃಷಿ ಅಧಿಕಾರಿ | ಕೃಷಿ ಅಧಿಕಾರಿ | ಸಹಾಯಕ ಕೃಷಿ ನಿರ್ದೇಶಕರು |
|---|---|---|
| ರೈತ ಸಂಪರ್ಕ ಕೇಂದ್ರ | ರೈತ ಸಂಪರ್ಕ ಕೇಂದ್ರ | ------- ತಾಲ್ಲೂಕು |
| ----- ಹೋಬಳಿ | ------- ಹೋಬಳಿ | |

**ವಿಶೇಷ ಸೂಚನೆ:**

1. ಪಾಲಿಥೀನ್ ಹೊದಿಕೆ ಅಳವಡಿಸಿರುವ ಕೃಷಿ ಹೊಂಡಗಳಿಗೆ ಮಾತ್ರ, ಕೃಷಿ ಹೊಂಡಗಳ ಸುತ್ತ ನೆರಳು ಪರದೆ **(Shadenet)** ಅಳವಡಿಸಲು ಕ್ರಮ ಕೈಗೊಳ್ಳುವುದು.
2. ಸುರಕ್ಷತಾ ಕ್ರಮವಾಗಿ ಕೃಷಿ ಹೊಂಡದ ಹತ್ತಿರ ಸೂಚನಾ ಫಲಕವನ್ನು ಹಾಗೂ ಹೊಂಡಗಳಲ್ಲಿ ಹಗ್ಗದೊಂದಿಗೆ ಟ್ಯೂಬ್ ಗಳನ್ನು ತಪ್ಪದೇ ಇಳಿಬಿಡುವುದು

## 4.5 ಡೀಸೆಲ್/ಪೆಟ್ರೋಲ್/ ಸೋಲಾರ್ ಪಂಪ್‌ಸೆಟ್ :

ಕೃಷಿ ಹೊಂಡದಲ್ಲಿ ಸಂಗ್ರಹಣೆಯಾದ ನೀರನ್ನು ಬಳಸಿಕೊಳ್ಳಲು ಡೀಸೆಲ್/ಪೆಟ್ರೋಲ್/ ಸೋಲಾರ್ ಪಂಪ್‌ಸೆಟ್ ಖರೀದಿಗೆ ಅವಕಾಶವಿರುತ್ತದೆ.

- **ಸೋಲಾರ್ ಪಂಪ್ ಸೆಟ್**: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ(KREDL) ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್ ಸೆಟ್ ಯೋಜನೆಯಡಿಅಥವಾ ಇತರೆ ಇಲಾಖೆಯ ಚಾಲ್ತಿ ಯೋಜನೆಗಳಲ್ಲಿಸೋಲಾರ್ ಪಂಪ್‌ಸೆಟ್ ನ್ನು ಅಳವಡಿಸಿದ ಕೃಷಿ ಭಾಗ್ಯ ಪ್ಯಾಕೇಜ್ ನ ಫಲಾನುಭವಿಗಳಿಗೆ ಕೃಷಿ ಭಾಗ್ಯ ಯೋಜನೆಯಡಿ ಪ್ರೋತ್ಸಾಹಧನವಾಗಿ ರೂ. 30,000/- ಗಳನ್ನು ನೀಡುವುದು. **ಅಥವಾ**,
- **ಡೀಸೆಲ್/ಪೆಟ್ರೋಲ್ ಪಂಪ್‌ಸೆಟ್**: ಗರಿಷ್ಟ 10 ಹೆಚ್.ಪಿ. ಸಾಮರ್ಥ್ಯದ ಡೀಸಲ್/ಪೆಟ್ರೋಲ್ ಪಂಪ್‌ಸೆಟ್ ಅನ್ನು ಇಲಾಖೆಯ SMAM/ NFSM/ State FM ಯೋಜನೆಯಡಿ ಅನುಮೋದಿತ ಸಂಸ್ಥೆಗಳಿಂದ ಪಡೆಯುವುದು. ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪರಿಶಿಷ್ಟ ಜಾತಿ ಹಾಗೂ ಪಂಗಡದ ರೈತರಿಗೆ ಶೇ.90 ರ ರಿಯಾಯಿತಿ ದರದಲ್ಲಿ ನೀಡುವುದು. (ಈಗಾಗಲೇ ಸದರಿ ಘಟಕವನ್ನು ಹೊಂದಿರುವ ಫಲಾನುಭವಿಗೆ ವಿತರಿಸುವಂತಿಲ್ಲ) ಒಗ್ಗೂಡಿಸುವಿಕೆಯಡಿ ಅನುದಾನ ಲಭ್ಯವಿಲ್ಲದಿದ್ದಲ್ಲಿ ಮಾತ್ರ ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸುವುದು.

ಸಂಸ್ಥೆಯಿಂದ ಡೀಸಲ್/ಪೆಟ್ರೋಲ್ ಸೋಲಾರ್ ಪಂಪ್‌ಸೆಟ್‌ನ್ನು ವಿತರಿಸಿದ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ಸ್ಥಳ ಪರಿಶೀಲನೆಯನ್ನು K-KISAN Mobile Appನ Post Inspection ತಂತ್ರಾಂಶದಲ್ಲಿ ನಡೆಸಿ, ಯಂತ್ರದ Unique ಸಂಖ್ಯೆ ಅನ್ನು K-KISAN Mobile ತಂತ್ರಾಂಶದಲ್ಲಿ ನಮೂದಿಸುವುದು.

## ಅನುಬಂಧ-4A

### ಡೀಸಲ್/ಪೆಟ್ರೋಲ್ ಪಂಪ್‌ಸೆಟ್ - ಒಪ್ಪಿಗೆ ಪತ್ರ ಮತ್ತು ಹಣ ಸಂದಾಯ ರಸೀದಿ

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ............................................................/.................................................................... ನಾನು FID/ಆದಾರ್ ಸಂಖ್ಯೆ..................... ..............................................................., ಕಾರ್ಯಾದೇಶ ಸಂಖ್ಯೆ............................ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ------ಯುನಿಟ್ ಡೀಸಲ್/ಪೆಟ್ರೋಲ್ ಪಂಪ್‌ಸೆಟ್ ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಸಹಾಯಧನ ರೂ. ------/-ಗಳನ್ನು ------------------------------------------ ಸಂಸ್ಥೆ ರವರಿಗೆ ನೇರವಾಗಿ ವರ್ಗಾವಣೆ ಮಾಡಲು ಒಪ್ಪಿರುತ್ತೇನೆ.

ಡೀಸಲ್/ಪೆಟ್ರೋಲ್ ಪಂಪ್‌ಸೆಟ್: Invoice No_____________, ದಿನಾಂಕ____________

ಸ್ಥಳ: ರೈತರ ಸಹಿ

ದಿನಾಂಕ:

### ಡೀಸಲ್/ಪೆಟ್ರೋಲ್ ಪಂಪ್‌ಸೆಟ್ ತೃಪ್ತಿಕರ ಪ್ರಮಾಣ ಪತ್ರ

----- ತಾಲ್ಲೂಕು ------ ಹೋಬಳಿ,__________________ಗ್ರಾಮದ ಶ್ರೀ/ ಶ್ರೀಮತಿ _______________________________ಆದ ನಾನು FID/ಆದಾರ್ ಸಂಖ್ಯೆ.................... ..........................................................................., ಕಾರ್ಯಾದೇಶ ಸಂಖ್ಯೆ........................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ____________ಅಳತೆಯ ಕೃಷಿ ಹೊಂಡ ನಿರ್ಮಿಸಿದ್ದು, ------------- ಸಂಸ್ಥೆಯವರು ಡೀಸಲ್/ಪೆಟ್ರೋಲ್ ಪಂಪ್‌ಸೆಟ್ ಅನ್ನು ಪಡೆದಿರುತ್ತೇನೆ. ಸದರಿಡೀಸಲ್/ಪೆಟ್ರೋಲ್ ಪಂಪ್‌ಸೆಟ್ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದೆಂದು ದೃಢೀಕರಿಸಿರುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ:

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>----- ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------- ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>------- ತಾಲ್ಲೂಕು |

## ಅನುಬಂಧ-4B

## ಸೋಲಾರ್ ಪಂಪ್‌ಸೆಟ್ - ಒಪ್ಪಿಗೆ ಪತ್ರ ಮತ್ತು ಹಣ ಸಂದಾಯ ರಸೀದಿ

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ........................................................../............................................................ ನಾನು___________________FID/ಆದಾರ್ ಸಂಖ್ಯೆ................................................ ಕಾರ್ಯಾದೇಶ ಸಂಖ್ಯೆ.........................., _________________ ಇಲಾಖೆಯ ________________________ ಯೋಜನೆಯಡಿಯಲ್ಲಿ ------ಯುನಿಟ್/ H.P ಸೋಲಾರ್ ಪಂಪ್‌ಸೆಟ್ ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಪ್ರೋತ್ಸಾಹಧನ ರೂ. ------/-ಗಳನ್ನು ಪಡೆದಿರುತ್ತೇನೆ.

ಸೋಲಾರ್ ಪಂಪ್‌ಸೆಟ್: Invoice No_____________, ದಿನಾಂಕ___________

ಸ್ಥಳ: ರೈತರ ಸಹಿ

ದಿನಾಂಕ:

## ಸೋಲಾರ್ ಪಂಪ್‌ಸೆಟ್ ತೃಪ್ತಿಕರ ಪ್ರಮಾಣ ಪತ್ರ

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ........................................................../............................................................ ನಾನು___________________FID/ಆದಾರ್ ಸಂಖ್ಯೆ................................................ ಕಾರ್ಯಾದೇಶ ಸಂಖ್ಯೆ.........................., _________________ ಇಲಾಖೆಯ ________________________ ಯೋಜನೆಯಡಿಯಲ್ಲಿ ------ಯುನಿಟ್/ H.P ಸೋಲಾರ್ ಪಂಪ್‌ಸೆಟ್ ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಪ್ರೋತ್ಸಾಹಧನ ರೂ. ------/-ಗಳನ್ನು ಪಡೆದಿರುತ್ತೇನೆ. ಸದರಿ ಸೋಲಾರ್ ಪಂಪ್‌ಸೆಟ್ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದೆಂದು ದೃಢೀಕರಿಸಿರುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ:

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>----- ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------- ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>-------- ತಾಲ್ಲೂಕು |

## 4.6 ಲಘು ನೀರಾವರಿ ಘಟಕಗಳು (ತುಂತುರು/ಹನಿ):

ಬೆಳೆಗಳಿಗೆ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿಗಾಗಿ ಬಳಸಿಕೊಳ್ಳಲು ರೈತರಿಗೆ ಗರಿಷ್ಠ ಒಂದು (1.0) ಹೆಕ್ಟೇರ್ ಪ್ರದೇಶಕ್ಕೆ ಬೇಕಾಗುವ ಲಘು ನೀರಾವರಿ ಘಟಕಗಳನ್ನು ಇಲಾಖೆಯ ಸೂಕ್ಷ್ಮ ನೀರಾವರಿ ಯೋಜನೆಯ ದರ ಕರಾರು ಹಾಗೂ ಮಾರ್ಗಸೂಚಿಯಂತೆ, ಶೇ.90 ರ ಸಹಾಯಧನದಲ್ಲಿ (ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ/ಪಂಗಡ) ಒದಗಿಸುವುದು. ಸದರಿ ಘಟಕಗಳಿಗೆ PMKSY-PDMC/ Atal Bhoo Jal ಯೋಜನೆಯಡಿ ವೆಚ್ಚ ಭರಿಸುವುದು.

- ಸಂಸ್ಥೆಯಿಂದ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕವನ್ನುಅಳವಡಿಸಿದ ಕೂಡಲೇ, ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ ಕೃಷಿ ಅಧಿಕಾರಿಗಳು ಸ್ಥಳ ಪರಿಶೀಲನೆಯನ್ನು PMKSY-PDMC/ Atal Bhoo Jal ಯೋಜನೆಯ ಮಾರ್ಗಸೂಚಿಯನ್ವಯ K-KISAN Mobile Appನ Post Inspection ತಂತ್ರಾಂಶದಲ್ಲಿ ಮಾಡುವುದು.

- ಸದರಿ ಘಟಕಗಳನ್ನು ಫಲಾನುಭವಿ ರೈತನ ಜಮೀನಿನಲ್ಲಿ ಅಳವಡಿಸಿರುವ ಬಗ್ಗೆ ಖಾತರಿಪಡಿಸಿಕೊಂಡು, ಧೃಡೀಕರಣದೊಂದಿಗೆ ನಿಯಮಾನುಸಾರ ಸಂಬಂಧಪಟ್ಟ ಸಂಸ್ಥೆಗೆ ಒಟ್ಟಾರೆ ಸಹಾಯಧನ ಮೊತ್ತವನ್ನು PMKSY-PDMC/ Atal Bhoo Jal ಯೋಜನೆಯಡಿ ಪಾವತಿಸಬಹುದಾಗಿರುತ್ತದೆ.

**ಅನುಬಂಧ-5**

**ಸೂಕ್ಷ್ಮ ನೀರಾವರಿ- ಒಪ್ಪಿಗೆ ಪತ್ರ ಮತ್ತು ಹಣ ಸಂದಾಯ ರಸೀದಿ**

------ತಾಲ್ಲೂಕು, ------ ಹೋಬಳಿ, ಗ್ರಾಮದ ರೈತನಾದ ಶ್ರೀ/ಶ್ರೀಮತಿ ................................................................................/............................................................................ ನಾನು FID/ಆದಾರ್ ಸಂಖ್ಯೆ.................... ............................................................., ಕಾರ್ಯಾದೇಶ ಸಂಖ್ಯೆ.......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ------ ಹೆಕ್ಟರ್ ಯುನಿಟ್ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕವನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಸಹಾಯಧನ ರೂ. ------/-ಗಳನ್ನು -------------------- ಸಂಸ್ಥೆ ರವರಿಗೆ ನೇರವಾಗಿ ವರ್ಗಾವಣೆ ಮಾಡಲು ಒಪ್ಪಿರುತ್ತೇನೆ. ಲಘು ನೀರಾವರಿ: Invoice No________________, ದಿನಾಂಕ____________________

ಸ್ಥಳ: ರೈತರ ಸಹಿ

ದಿನಾಂಕ:

**ಸೂಕ್ಷ್ಮ ನೀರಾವರಿ ಘಟಕ ತೃಪ್ತಿಕರ ಪ್ರಮಾಣ ಪತ್ರ, ಐ.ಎಸ್.ಐ (ISI) ಪ್ರಮಾಣ ಪತ್ರ ಮತ್ತು ಅಳವಡಿಕೆ ಪ್ರಮಾಣ ಪತ್ರ**

------ ತಾಲ್ಲೂಕು ------- ಹೋಬಳಿ, ________________ಗ್ರಾಮದ ಶ್ರೀ/ಶ್ರೀಮತಿ __________________________________ ಆದ ನಾನು FID/ಆದಾರ್ ಸಂಖ್ಯೆ................... ....................................................., ಕಾರ್ಯಾದೇಶ ಸಂಖ್ಯೆ.......................... ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡ ನಿರ್ಮಿಸಿದ್ದು, ಬೆಳೆಗಳಿಗೆ ನೀರು ಹಾಯಿಸಲು ----------- ಸಂಸ್ಥೆಯ ----- ಹೆಕ್ಟರ್ ಯುನಿಟ್ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕವನ್ನು ಅಳವಡಿಸಿರುತ್ತಾರೆ. ಸದರಿ ಘಟಕವು ಐ.ಎಸ್.ಐ (ISI) ಚಿನ್ಹೆ ಹೊಂದಿರುತ್ತದೆ ಹಾಗೂ ಸದರಿ ಉಪಕರಣವು ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ದೃಢೀಕರಿಸಿರುತ್ತೇನೆ.

ಸ್ಥಳ: ರೈತರ ಸಹಿ

ದಿನಾಂಕ:

ಸದರಿ ರೈತರು ಖರೀದಿಸಿರುವ ------ ಘಟಕದ ಭೌತಿಕ ಪರಿಶೀಲನೆಯನ್ನು ದಿ --------- ರಂದು ಮಾಡಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ದೃಢೀಕರಿಸಲಾಗಿದೆ.

| | | |
|---|---|---|
| ಸಹಾಯಕ ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------ ಹೋಬಳಿ | ಕೃಷಿ ಅಧಿಕಾರಿ<br>ರೈತ ಸಂಪರ್ಕ ಕೇಂದ್ರ<br>------ ಹೋಬಳಿ | ಸಹಾಯಕ ಕೃಷಿ ನಿರ್ದೇಶಕರು<br>----- ತಾಲ್ಲೂಕು, |

**5. ದಾಖಲಾತಿ ನಿರ್ವಹಣೆ:**

1. ರೈತರಿಂದ ಸ್ವೀಕೃತಗೊಂಡ ಸಂಪೂರ್ಣ ದಾಖಲಾತಿಯನ್ನು ಜೇಷ್ಠತಾ ವಹಿಯಲ್ಲಿ ಹಾಗೂ ನೊಂದಣಿಯನ್ನು K-KISAN Web ತಂತ್ರಾಂಶದಲ್ಲಿ ನಿರ್ವಹಿಸುವುದು.
2. ಅಳತೆ ಪುಸ್ತಕಗಳ ದಾಸ್ತಾನು ವಹಿ (ತಾಲ್ಲೂಕು ಸ.ಕೃ.ನಿ ಕಛೇರಿ)
3. ಅಂದಾಜು ಪತ್ರಿಕೆ ಮಂಜೂರಾತಿ ವಹಿ (ಸ.ಕೃ.ನಿ ರವರ ಅನುಮೋದನೆಯೊಂದಿಗೆ ರೈ.ಸಂ.ಕೇಂದ್ರದಲ್ಲಿ ನಿರ್ವಹಣೆ)
4. ಸ್ಥಳದಲ್ಲಿಯೇ ನೀರು ಸಂರಕ್ಷಿಸುವ ಘಟಕಗಳಾದ ಕ್ಷೇತ್ರ ಬದು, ಕೃಷಿ ಹೊಂಡ(Silt trap ಒಳಗೊಂಡಂತೆ), ಪಾಲಿಥೀನ್ ಹೊದಿಕೆ ಮತ್ತು *ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ* ಹಾಗೂನೆರಳು ಪರದೆ ರಚನೆಯ ದಾಖಲಾತಿ ನಿರ್ವಹಣೆ **Check Measurement/MB**

**recording**etc.,-ರೈತ ಸಂಪರ್ಕ ಕೇಂದ್ರದ ಸಹಾಯಕ ಕೃಷಿ ಅಧಿಕಾರಿ/ಕೃಷಿ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

5. ಒಟ್ಟು ಪ್ಯಾಕೇಜಿಗೆ ಫಲಾನುಭವಿವಾರು ಘೋಷ್ವಾರೆಯನ್ನು ರೈತ ಸಂಪರ್ಕ ಕೇಂದ್ರದಲ್ಲಿ ಕಡ್ಡಾಯವಾಗಿ ನಿರ್ವಹಿಸುವುದು.

6. K-KISAN Mobile ತಂತ್ರಾಂಶದಲ್ಲಿ ಫೋಟೋ ದಾಖಲಾತಿ:

   i. Pre-Inspection (ಕ್ಷೇತ್ರ ಬದು, ಕೃಷಿ ಹೊಂಡ)

   ii. Post-Inspection

   - ಕ್ಷೇತ್ರ ಬದು
   - ಕೃಷಿ ಹೊಂಡ (Silt trap ಒಳಗೊಂಡಂತೆ)
   - ಪಾಲಿಥೀನ್ ಹೊದಿಕೆ
   - ಡೀಸಲ್/ಪೆಟ್ರೋಲ್ /ಸೋಲಾರ್ ಪಂಪ್ ಸೆಟ್
   - ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕ
   - ತಂತಿ ಬೇಲಿ ಹಾಗೂ ನೆರಳು ಪರದೆ

**ಕೃಷಿ ಭಾಗ್ಯ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಘಟಕಗಳ ಅನುಷ್ಠಾನದಲ್ಲಿ, ಈ ಕೆಳಕಂಡಂತೆ ದಾಖಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸಲು ತಿಳಿಸಿದೆ.**

1. ರೈತರ ಮೂಲ ದಾಖಲೆಗಳು
   - ರೈತರ ಅರ್ಜಿ
   - ರೈತರ ಭಾವಚಿತ್ರ
   - ಆದಾರ್ ಪ್ರತಿ
   - ಪಹಣಿ ಪ್ರತಿ
   - ಜಾತಿ ಪ್ರಮಾಣ ಪತ್ರ,
   - ಬ್ಯಾಂಕ್ ಪಾಸ್ ಬುಕ್ ಪ್ರತಿ

2. ಪ್ರತಿ ಫಲಾನುಭವಿಗಳಿಗೆ ಘಟಕವಾರು ಕಾರ್ಯಾದೇಶ ನೀಡಿದ ಪ್ರತಿ (Sanction order).

3. **GPS** ಆಧರಿಸಿದ ಕಾಮಗಾರಿ ಪ್ರಾರಂಭದ ಮೊದಲು, ಕಾರ್ಯ ಪ್ರಗತಿಯಲ್ಲಿದ್ದಾಗ, ಹಾಗೂ ಅಂತಿಮಗೊಳಿಸಿದ ಭಾವಚಿತ್ರ. ಇದೇ ರೀತಿ ಇತರೆ ಘಟಕಗಳ ಧೃಡೀಕೃತ ಬಿಲ್ಲುಗಳು, ದಾಖಲೆಗಳ ಹಾಗೂ ಛಾಯಾಚಿತ್ರಗಳನ್ನು ದಾಖಲಿಸುವುದು. (ತಾಲ್ಲೂಕು ಸ.ಕೃ.ನಿ ಕಛೇರಿ)

4. ಸ.ಕೃ.ನಿ / ಜ.ಕೃ.ನಿ ಯವರಿಂದ ಮಂಜೂರಾದ ಅಂದಾಜು ಪಟ್ಟಿಯ ಪ್ರತಿ (Technical Sanction copy of the estimate)

5. ಪಾಲಿಥೀನ್ ಲೈನಿಂಗ್/ ಡೀಸಲ್/ಪೆಟ್ರೋಲ್/ಸೋಲಾರ್ ಪಂಪ್‌ಸೆಟ್ ಲಘು ನೀರಾವರಿ ಘಟಕಗಳಿಗೆ ಇಲಾಖೆಯಿಂದ ಅನುಮೋದಿಸಿದ ಅಧೀಕೃತ ಮಾರಾಟಗಾರರಿಂದ ಪಡೆದ ರಸೀದಿಗಳು.

6. ರೈತರು ಕೃಷಿ ಹೊಂಡಗಳಿಗೆ ತಂತಿ ಬೇಲಿ ಹಾಗೂ ನೆರಳು ಪರದೆ(Shadenet) ಖರೀದಿಸಿ ಅಳವಡಿಸಿರುವ, ದಿನಾಂಕ ಮತ್ತು ಮೊತ್ತದ ರಸೀದಿ.
7. ಎಲ್ಲಾ ಘಟಕಗಳರೈತರ ವಂತಿಕೆ ಪಾವತಿಯ R.T.G.S ದಾಖಲಾತಿ. (ಅನುದಾನದ ಮೊತ್ತ/ ಬ್ಯಾಂಕ್ ಹೆಸರು/ ಶಾಖೆ ಹೆಸರು/ ಇತರೆ ಮಾಹಿತಿ ಸ.ಕೃ.ನಿ ಯವರ ಶಿಫಾರಸ್ಸಿನೊಂದಿಗೆ)
8. ಇಲಾಖೆಯಿಂದ ನೀಡಿರುವ ಸವಲತ್ತುಗಳನ್ನು ಪರಬಾರೆ ಮಾಡದಿರುವ ಬಗ್ಗೆ ರೂ.20 ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪಡೆಯುವುದು ಮತ್ತು ಪರಭಾರೆಯಾಗಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ ಸಹಾಯಧನವನ್ನು ವಸೂಲಿ ಮಾಡುವ ಸಂಪೂರ್ಣ ಅಧಿಕಾರ ಕೃಷಿ ಇಲಾಖೆಗೆ ಇರುತ್ತದೆಂದು ರೈತರಿಗೆ ಲಿಖಿತ ಸೂಚನೆ ನೀಡುವುದು.
9. ಅಳತೆ ತಪಾಸಣೆ ವರದಿಗಳು(CMR)
   - ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿ- ಶೇ. **100**
   - ತಾಲ್ಲೂಕು ಸ.ಕೃ.ನಿ- ಶೇ. **15**
   - ಉ.ಕೃ.ನಿ- ಶೇ. **5**
   - ಜಿಲ್ಲಾ ಜ.ಕೃ.ನಿ- ಶೇ. **2**
10. ಯಶೋಗಾಥೆಗಳ ಬಗ್ಗೆ ಕಡತ.
11. ಆದಾಯ ತೆರಿಗೆ ನಿಯಮಗಳನ್ವಯ ಆದಾಯ ತೆರಿಗೆಯನ್ನು, ಎಲ್ಲಾ ಕಾಮಗಾರಿ ಬಿಲ್ಲುಗಳಲ್ಲಿ ಕಡಿತಗೊಳಿಸಬೇಕು ಹಾಗೂ ಸದರಿ ತೆರಿಗೆ ಹಣವನ್ನು ಸಂಬಂಧಪಟ್ಟ ಇಲಾಖೆಗೆ ನಿಯಮಾನುಸಾರ ತುಂಬಬೇಕು.

**6. ದಾಸ್ತಾನು ನಿರ್ವಹಣೆ:**

ಕೃಷಿ ಭಾಗ್ಯ ಯೋಜನೆಯಡಿ HDPE geo-membrane/ಪಂಪ್ ಸೆಟ್ (ಡೀಸೆಲ್/ಪೆಟ್ರೋಲ್/ ಸೋಲಾರ್)/ ಸೂಕ್ಷ್ಮ (ತುಂತುರು/ಹನಿ) ನೀರಾವರಿ ಘಟಕಗಳನ್ನು ಇಲಾಖೆಯ ಮಾರ್ಗಸೂಚಿಯನ್ವಯ ಅಧಿಸೂಚಿಸಿದ ರಿಯಾಯಿತಿಯನ್ವಯ ಮತ್ತು ಖರೀದಿ ನಿಯಮಮಮಗಳನ್ವಯ ಸಹಾಯಕ ಕೃಷಿ ನಿರ್ದೇಶಕರು ಕಚೇರಿಯ **ಕೇಂದ್ರೀಯ ದಾಸ್ತಾನು ವಹಿ**ಯಲ್ಲಿ ದಾಸ್ತಾನು ಸ್ವೀಕೃತಿ ಅವಶ್ಯವಿರುತ್ತದೆ.

ರೈತ ಸಂಪರ್ಕ ಕೇಂದ್ರ ಮಟ್ಟದಲ್ಲಿ ಕೃಷಿ ಭಾಗ್ಯ ಯೋಜನೆಗೆ ಸಂಬಂಧಿಸಿದಂತೆ, ಪ್ರತ್ಯೇಕ ವಹಿ ನಿರ್ವಹಿಸಿ ಫಲಾನುಭವಿವಾರು, ಇಲಾಖೆಯಿಂದ ಸಹಾಯಧನ ಒದಗಿಸಿರುವ ಸಾಮಾಗ್ರಿಗಳ/ ಕಾಮಗಾರಿಗಳ ವಿವರಗಳನ್ನು ನಮೂದಿಸಿ ರೈತರ ಸಹಿ ಪಡೆಯಲು ಸೂಚಿಸಿದೆ.

**ಪ್ರಚಾರ ಕಾರ್ಯಕ್ಕೆ ಭರಿಸಬಹುದಾದ ವೆಚ್ಚ (ವಾಸ್ತವಿಕ ವೆಚ್ಚ):**

- ಕೃಷಿ ಭಾಗ್ಯ ಯೋಜನೆಯ ಬಗ್ಗೆ ರೈತರಿಗೆ ಪತ್ರಿಕಾ ಪ್ರಕಟಣೆ/ಸಮೂಹ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರದ ವೆಚ್ಚ
- ತಾಲ್ಲೂಕು ಮಟ್ಟದ ಕೃಷಿ ಭಾಗ್ಯ ಯೋಜನೆಯ ಒಂದು ದಿನದ ತರಬೇತಿಯ ವೆಚ್ಚ

➢ ಪ್ರಚಾರ ಕಾರ್ಯಕ್ಕೆ ಭರಿಸಲಾದ ವೆಚ್ಚ ಹಾಗೂತಾಲ್ಲೂಕು/ಜಿಲ್ಲಾ ಮಟ್ಟದ ಕೃಷಿ ಮೇಳದಲ್ಲಿ ಮಾದರಿ ಪ್ರದರ್ಶನ.(ವಾಸ್ತವಿಕ ವೆಚ್ಚ)

**ಯೋಜನೆಯಡಿ ಬಿಡುಗಡೆ ಮಾಡುವ ಆಡಳಿತಾತ್ಮಕ ಅನುದಾನವನ್ನು (059) ಈ ಕೆಳಕಂಡಂತೆ ವೆಚ್ಚ ಭರಿಸಬಹುದಾಗಿದೆ.**

- ಯೋಜನೆಯ ಉಸ್ತುವಾರಿ,
- ಅರ್ಜಿ ಮುದ್ರಣ: ರೈತರಿಗೆ ವಿತರಿಸಲಾದ ಅರ್ಜಿ ನಮೂನೆ ಪ್ರತಿಗಳಿಗೆ
- ದಾಖಲಾತಿ ನಿರ್ವಹಣೆ,
- ಕ್ಷೇತ್ರೋತ್ಸವ ಕಾರ್ಯಕ್ರಮ ಮತ್ತು ಯಶೋಗಾಥೆ ದಾಖಲೀಕರಣ
- ಯೋಜನೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ- ಪ್ರಚಾರ/ಕ್ಷೇತ್ರೋತ್ಸವ/ಕೃಷಿ ಮೇಳ
- ಪಾಲಿಥೀನ್ ಹೊದಿಕೆಯ ಮಾದರಿಯನ್ನು ತೆಗೆದು BIS recognized ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸುವುದು ಹಾಗೂ ವಿಶ್ಲೇಷಣಾ ಶುಲ್ಕವನ್ನು ಆಡಳಿತಾತ್ಮಕ ವೆಚ್ಚ (059) ಘಟಕದಡಿ ಭರಿಸುವುದು.
- Data entry Operator ಸೇವೆ: ತಾಲ್ಲೂಕಿಗೆ ಒಬ್ಬರಂತೆ ಡಾಟಾ ಎಂಟ್ರಿ ಆಪರೇಟರ್ ಗಳನ್ನು ನೇಮಕ ಮಾಡಿಕೊಳ್ಳುವುದು ಹಾಗೂ ಅವರ ವೇತನ/ ಗೌರವಧನವನ್ನು ಕಾರ್ಮಿಕ ಇಲಾಖೆಯ ಕನಿಷ್ಟ ವೇತನ ಮಾರ್ಗಸೂಚಿಯನ್ನು ಅನುಸರಿಸಬಹುದಾಗಿರುತ್ತದೆ.
- ಕೇಂದ್ರ ಕಛೇರಿಗೆ ಆಡಳಿತಾತ್ಮಕ ವೆಚ್ಚ

**ಘಟಕಗಳ ಅನುಷ್ಠಾನ ನಂತರ ಅನುದಾನ ಪಾವತಿ ವಿಧಾನ:**

1. ಕ್ಷೇತ್ರ ಬದು ನಿರ್ಮಾಣ ಹಾಗೂ ಕೃಷಿಹೊಂಡ ಪೂರ್ಣಗೊಂಡ ನಂತರ ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ನಿರ್ಮಿಸಿಕೊಳ್ಳುವ ಬಗ್ಗೆ ರೈತರಿಂದ ದೃಡೀಕರಣ ಪತ್ರ ಪಡೆದುಕೊಂಡು, ಕ್ಷೇತ್ರ ಬದು ಹಾಗೂ ಕೃಷಿಹೊಂಡ ಘಟಕಗಳಿಗೆ ಸಂಬಂಧಿಸಿದ ಒಟ್ಟು ಸಹಾಯಧನದಶೇ. 75 ರಷ್ಟು ಮೊತ್ತವನ್ನು ರೈತರ ಖಾತೆಗೆ ಜಮೆ ಮಾಡುವುದು.
2. ಪಾಲಿಥೀನ್ ಹೊದಿಕೆಗೆ ರೈತರ ವಂತಿಕೆ ಪಾವತಿಸಿ, ಕೃಷಿಹೊಂಡದಲ್ಲಿ ಪಾಲಿಥೀನ್ ಹೊದಿಕೆಯ ಅಳವಡಿಕೆಯ ನಂತರ ಸರಬರಾಜು ಸಂಸ್ಥೆಗೆ ಸಹಾಯಧನವನ್ನು ಪಾವತಿಸುವುದು.
3. ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ನಿರ್ಮಿಸಿದ ನಂತರ ಮಾರ್ಗಸೂಚಿಯನ್ವಯ ಸಹಾಯಧನವನ್ನು ರೈತರ ಖಾತೆಗೆ ನೇರವಾಗಿ ಜಮೆ ಮಾಡುವುದು.
4. ವಿಷಯ ಸೂಚಿ 4.5 ಮತ್ತು 4.6 ರಂತೆ ಡೀಸಲ್/ ಪೆಟ್ರೋಲ್ಪಂಪ್ ಸೆಟ್ ಮತ್ತು ಲಘು ನೀರಾವರಿ ಘಟಕಗಳಿಗೆ ಸಂಬಂಧಿಸಿದ ಸಹಾಯಧನವನ್ನು ಸರಬರಾಜು ಸಂಸ್ಥೆಗೆ ಪಾವತಿಸುವುದು.
5. ಡೀಸಲ್/ ಪೆಟ್ರೋಲ್ ಪಂಪ್ ಸೆಟ್ ಬದಲಾಗಿ, ಸೋಲಾರ್ ಪಂಪ್ ಸೆಟ್ ಅನ್ನು ಇತರೆ ಇಲಾಖೆಗಳ ಚಾಲ್ತಿ ಯೋಜನೆಗಳಿಂದ ಪಡೆದು ಅಳವಡಿಸಿಕೊಂಡಿದ್ದಲ್ಲಿ ಪ್ರೋತ್ಸಾಹಧನವಾಗಿ ರೂ. 30,000/- ಗಳನ್ನು ಪ್ರತಿ ಘಟಕಕ್ಕೆ ಕೃಷಿ ಭಾಗ್ಯ ಯೋಜನೆಯಡಿ ವೆಚ್ಚ ಭರಿಸುವುದು.

6. ಕೃಷಿ ಭಾಗ್ಯ ಯೋಜನೆ ಪ್ಯಾಕೇಜ್ ಅಡಿ ಬರುವ ಆರು ಘಟಕಗಳ ಅನುಷ್ಠಾನ ಮತ್ತು K-KISAN Mobile App ನಲ್ಲಿ ದಾಖಲೀಕರಿಸಿದ ನಂತರ ಉಳಿಕೆ ಶೇ. 25 ರಷ್ಟುಸಹಾಯಧನದ ಮೊತ್ತವನ್ನು ರೈತರ ಖಾತೆಗೆ ಜಮೆ ಮಾಡುವುದು.

**ಕೃಷಿ ಭಾಗ್ಯ ಯೋಜನೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ**

| | |
|---|---|
| ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು(ಜಿಲ್ಲಾ ಪಂಚಾಯತ್) | ಅಧ್ಯಕ್ಷರು |
| ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| ಉಪ ನಿರ್ದೇಶಕರು, ರೇಷ್ಮೆ ಇಲಾಖೆ | ಸದಸ್ಯರು |
| ಉಪ ನಿರ್ದೇಶಕರು, ಪಶು ವೈದ್ಯಕೀಯ ಮತ್ತು ಸಂಗೋಪನಾ ಇಲಾಖೆ | ಸದಸ್ಯರು |
| ಜಿಲ್ಲಾ ಜಂಟಿ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಸದರಿ ಸಮಿತಿಯು ಈ ಕೆಳಗಿನಂತೆ ಕಾರ್ಯ ನಿರ್ವಹಿಸುವುದು.**

1. ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯು ಯೋಜನೆಯ ಪ್ರಗತಿಯ ಉಸ್ತುವಾರಿ ನೋಡಿಕೊಳ್ಳುವುದು.
2. ಆಯ್ಕೆಯಾದ ಫಲಾನುಭವಿಗಳ ಸಮಗ್ರ ಅಭಿವೃದ್ಧಿಗಾಗಿ ಮತ್ತು ಸುಸ್ಥಿರ ಕೃಷಿಯನ್ನು ರೂಪಿಸಲು ಇತರೆ ಇಲಾಖೆಗಳಿಂದ ಜೀವನೋಪಾಯಕ್ಕೆ ಸಂಬಂಧಿಸಿದ ಘಟಕಗಳ ಅನುಷ್ಠಾನಗೊಳಿಸುವುದು.
3. ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯು, ಅಗತ್ಯಕ್ಕೆ ಅನುಗುಣವಾಗಿ ಕಾಲಕಾಲಕ್ಕೆ ಸಭೆಯನ್ನು ನಡೆಸುವುದು ಹಾಗೂ ಪ್ರತಿ ಮಾಹೆಯಲ್ಲಿ ಒಮ್ಮೆ ಸಭೆಯನ್ನು ಕಡ್ಡಾಯವಾಗಿ ನಡೆಸುವುದು.

**ಕೃಷಿ ಭಾಗ್ಯ ಯೋಜನೆಯ ರಾಜ್ಯ ಮಟ್ಟದ ಸಮನ್ವಯ ಸಮಿತಿ**

| | |
|---|---|
| ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ | ಅಧ್ಯಕ್ಷರು |
| ಆಯುಕ್ತರು, ಕೃಷಿ ಇಲಾಖೆ | ಸದಸ್ಯರು |
| ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| ಕೃಷಿ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| ಅಪರ ಕೃಷಿ ನಿರ್ದೇಶಕರು, ಸಾವಯವ ಕೃಷಿ, ಕೃಷಿ ಇಲಾಖೆ | ಸದಸ್ಯ ಕಾರ್ಯದರ್ಶಿ |

**ಸದರಿ ಸಮಿತಿಯು ಈ ಕೆಳಗಿನಂತೆ ಕಾರ್ಯ ನಿರ್ವಹಿಸುವುದು.**

1. ಯೋಜನೆಯ ಅನುಷ್ಠಾನಕ್ಕೆ ಅವಶ್ಯವಿರುವಂತೆ ಮಾರ್ಗಸೂಚಿಯಲ್ಲಿ ತಿದ್ದುಪಡಿಗಳನ್ನು ಹಾಗೂ ಇತರೆ ಮಾರ್ಪಾಡುಗಳನ್ನು ಮಾಡುವ ಅಧಿಕಾರ ಹೊಂದಿರುತ್ತದೆ.
2. ಪರಿಷ್ಕೃತ ದರ ಸೂಚಿಗಳನ್ವಯ ಕಾಲಕಾಲಕ್ಕೆ ವಿವಿಧ ಘಟಕಗಳ ಅಂದಾಜು ಪತ್ರಿಕೆಗಳನ್ನು ಪರಿಷ್ಕರಿಸುವ ಅಧಿಕಾರ ಹೊಂದಿರುತ್ತದೆ.
3. ರಾಜ್ಯ ಮಟ್ಟದಲ್ಲಿ ಯೋಜನೆಯ ಪ್ರಗತಿಯ ಉಸ್ತುವಾರಿ ನೋಡಿಕೊಳ್ಳುವುದು.

**ಫಲಾನುಭವಿಗಳಿಗೆ ಷರತ್ತು ಬದ್ಧ ಕಾರ್ಯಾದೇಶ ನೀಡುವ ಬಗ್ಗೆ:**

1. ಆಡಳಿತಾತ್ಮಕ ಮಂಜೂರಾತಿ ಆದೇಶ/ ಕಾರ್ಯಾದೇಶದಲ್ಲಿ **(Work Order)** ಫಲಾನುಭವಿಗೆ ಕಾಮಗಾರಿಗಳನ್ನು ಕಾಲವಿಳಂಬವಿಲ್ಲದೆ ಪ್ರಾರಂಭಿಸಿ 15-30 ದಿನಗಳೊಳಗೆ ಕಾರ್ಯ ಪೂರ್ಣಗೊಳಿಸುವಂತೆ ಆದೇಶ ನೀಡುವುದು.

2. ಮಂಜೂರಾತಿ ಆದೇಶ ನೀಡಿದ ನಂತರ ಫಲಾನುಭವಿಯು 15-30 ದಿನಗಳೊಳಗೆ ಕಾರ್ಯ ಪೂರ್ಣಗೊಳಿಸದೇ ಇದ್ದಲ್ಲಿ ಅರ್ಜಿಯನ್ನು ರದ್ದುಪಡಿಸುವ ಬಗ್ಗೆ ರೈತರಿಂದ ಮುಚ್ಚಳಿಕೆ ಪಡೆಯುವುದು.

3. ಫಲಾನುಭವಿಗಳು ಕ್ಷೇತ್ರ ಬದು ಮತ್ತು ಕೃಷಿ ಹೊಂಡ ನಿರ್ಮಿಸಿಕೊಂಡು ಪಾಲಿಥೀನ್ ಹೊದಿಕೆಗೆ ರೈತರ ವಂತಿಕೆಯನ್ನು RTGS ಪಾವತಿಸಿದ ನಂತರವೇ, ಕ್ಷೇತ್ರ ಬದು, ಕೃಷಿ ಹೊಂಡ ಘಟಕಕ್ಕೆ ಸಂಬಂಧಿಸಿದ ಸಹಾಯಧನವನ್ನು ರೈತರಿಗೆ ಪಾವತಿಸುವುದು.

4. ಕೃಷಿ ಭಾಗ್ಯ ಯೋಜನೆಯಡಿ ಕ್ಷೇತ್ರ ಬದು, ಕೃಷಿ ಹೊಂಡ, ಪಾಲಿಥೀನ್ ಹೊದಿಕೆ ಮತ್ತು ಕೃಷಿ ಹೊಂಡದ ಸುತ್ತಲು ತಂತಿ ಬೇಲಿ /ನೆರಳು ಪರದೆ ಘಟಕಗಳು ಖಡ್ಡಾಯವಾಗಿದ್ದು, ಸದರಿ ಘಟಕಗಳ ಸಹಾಯಧನವನ್ನು ನಿಯಮಾನುಸಾರ ಪಾವತಿಸುವುದು.ರೈತರು ಬೇಡಿಕೆ ಇಟ್ಟಲ್ಲಿ ಮಾತ್ರ ಉಳಿದ ಘಟಕಗಳನ್ನು ನೀಡುವುದು ಎಂದು ರೈತರಿಗೆ ತಿಳಿಸುವುದು.

5. ನೀರು ಹರಿಯುವ ದಾರಿಗಳ ರಚನೆ ಮಾಡುವುದು ಹಾಗೂ ಕೃಷಿ ಹೊಂಡ ನಿರ್ವಹಣೆ ಸಂಪೂರ್ಣ ರೈತರ ಜವಾಬ್ದಾರಿಯಾಗಿರುತ್ತದೆ

**ಯೋಜನೆಯ ಉಸ್ತುವಾರಿ:**

- ಫಲಾನುಭವಿಯು ಒಂದೇ ಇಲಾಖೆಯಿಂದ ಹಾಗೂ ಒಂದೇ ಯೋಜನೆಯಿಂದ ಸಹಾಯಧನವನ್ನು ಪಡೆಯುವುದನ್ನು ಖಾತ್ರಿ ಪಡಿಸಿಕೊಳ್ಳಲು, ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಇತರೆ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ದೃಢೀಕರಣ ಪಡೆಯುವುದು. (No Objection Certificate)
- ತಾಲ್ಲೂಕು ಮಟ್ಟದಲ್ಲಿ ಪ್ರಗತಿ ಪರಿಶೀಲನೆಗಾಗಿ ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸುವುದು.

**ಕೃಷಿ ಭಾಗ್ಯ ತಂತ್ರಾಂಶ:**

- ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ತಂತ್ರಾಂಶದಲ್ಲಿ ದಾಖಲಿಸುವುದು. ವಿವರಗಳನ್ನು ದಾಖಲಿಸಲು ಕೃಷಿ ಭಾಗ್ಯ ಯೋಜನೆಯಡಿ Data Entry Operator ಸೇವೆಗಳನ್ನು ಬಳಸಿಕೊಳ್ಳುವುದು.
- ಕಾರ್ಯಾದೇಶವನ್ನು ಕಡ್ಡಾಯವಾಗಿ ತಂತ್ರಾಂಶದ ಮೂಲಕವೇ ನೀಡುವುದು ಹಾಗೂ ತಂತ್ರಾಂಶದಲ್ಲಿ ಗಣಕೀಕರಿಸಿದ ನಂತರವೇ ವೆಚ್ಚ ಭರಿಸಲು ಸೂಚಿಸಿದೆ.
- ಎಲ್ಲಾ ಘಟಕಗಳ GPS Co-ordinates ಮಾಹಿತಿ ಒಳಗೊಂಡ ಛಾಯಾಚಿತ್ರಗಳನ್ನು ತಂತ್ರಾಂಶದ ಮೂಲಕ upload ಮಾಡುವುದು.

**ಲಗತ್ತುಗಳು:**

1. **ಅರ್ಜಿ ನಮೂನೆ-1 :** ರೈತರ ಅರ್ಜಿ ನಮೂನೆ

2. **ಅನುಬಂಧ-1A & 1B**: ಕೃಷಿ ಭಾಗ್ಯ ಯೋಜನೆಯ ಕ್ರಿಯಾ ಯೋಜನೆ ಹಾಗೂ ಅನುಷ್ಠಾನಜಿಲ್ಲೆ/ ತಾಲ್ಲೂಕುಗಳ ವಿವರ

# ನಮೂನೆ-1
## ರೈತರು ಸಲ್ಲಿಸುವ ಅರ್ಜಿ ನಮೂನೆ

ಅರ್ಜಿ ಕ್ರಮ ಸಂಖ್ಯೆ:
ರೈತರ ಹೆಸರು ಹಾಗೂ ವಿಳಾಸ:
ವರ್ಗ:
ಗ್ರಾಮ;
ಹೋಬಳಿ:
ತಾಲ್ಲೂಕು:
ಸರ್ವೇ ನಂಬರ್ ಮತ್ತು ವಿಸ್ತೀರ್ಣ:
ಬ್ಯಾಂಕ್ ಖಾತೆ ಸಂಖ್ಯೆ ಮತ್ತು ವಿಳಾಸ:
ಆಧಾರ ಸಂಖ್ಯೆ:
ದೂರವಾಣಿ ಸಂಖ್ಯೆ:
FID:

ಭಾವಚಿತ್ರ

| ಕ್ರ. ಸಂ. | ಘಟಕ | ಬೇಡಿಕೆ (Existing/ New) | ಮಿ.ಮೀ/ವಿಸ್ತೀರ್ಣ/ಹೆಚ್.ಪಿ | **ರೈತರ ಆಯ್ಕೆಯ ಸರಬರಾಜು ಸಂಸ್ಥೆ** |
|---|---|---|---|---|
| 1 | ಕ್ಷೇತ್ರ ಬದು ನಿರ್ಮಾಣ | | | |
| 2 | ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ) (ಮಿ.ಮಿ) | | | |
| 3 | ಪಾಲಿಥೀನ್ ಹೊದಿಕೆ | | | |
| 4 | ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ | | | |
| 5 | ಕೃಷಿ ಹೊಂಡದಿಂದ ನೀರು ಎತ್ತಲು ಪಂಪ್‌ಸೆಟ್ | | | |
| ಅ | ಡೀಸೆಲ್/ಪೆಟ್ರೋಲ್ ಪಂಪ್‌ಸೆಟ್ (ಗರಿಷ್ಠ 10 ಹೆಚ್.ಪಿ) | | | |
| ಆ | ಸೋಲಾರ್ ಪಂಪ್‌ಸೆಟ್ | | | |
| 6 | ಸೂಕ್ಷ್ಮ ನೀರಾವರಿ (ಗರಿಷ್ಠ 1 ಹೆ.) | | | |
| ಅ | ತುಂತುರು ನೀರಾವರಿ ಘಟಕ | | | |
| ಆ | ಹನಿ ನೀರಾವರಿ ಘಟಕ | | | |
| | ಒಟ್ಟು | | | |

**<u>ಸೂಚನೆ :</u>** ಯೋಜನೆಯಡಿ ಕೃಷಿ ಹೊಂಡ, ಪಾಲಿಥೀನ್ ಹೊದಿಕೆ ಮತ್ತು ತಂತಿ ಬೇಲಿ ಘಟಕಗಳು ಕಡ್ಡಾಯವಾಗಿರುತ್ತದೆ.

**ಲಗತ್ತುಗಳು:** ಪಹಣಿ/ ನೀರಿನ ಲಭ್ಯತೆ ಪ್ರಮಾಣ ಪತ್ರ (ಕೊಳವೆ ಬಾವಿ ಇರುವ ರೈತರು)/ ರೈತರ ವರ್ಗ ಪ್ರಮಾಣ ಪತ್ರ/ ಆಧಾರ ಪ್ರತಿ/ಬ್ಯಾಂಕ್ ಪಾಸ್ ಬುಕ್ ಪ್ರತಿ/ಇತರೆ ದಾಖಲೆಗಳು

ಈ ಹಿಂದೆ ಮೇಲಿನ ಯಾವುದೇ ಘಟಕಗಳಿಗೆ ಕೃಷಿ ಮತ್ತು ಸಮನ್ವಯ ಇಲಾಖೆಗಳಿಂದ ಸಹಾಯಧನವನ್ನು ಪಡೆದಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ:_______ ರೈತರ ಸಹಿ

ಕೃಷಿ ಅಧಿಕಾರಿ
ರೈತ ಸಂಪರ್ಕ ಕೇಂದ್ರ, _____ ಹೋಬಳಿ

ಸಹಾಯಕ ಕೃಷಿ ನಿರ್ದೇಶಕರು
---------------ತಾಲ್ಲೂಕು

**ಅನುಭಂದ-1A**

**"ರಾಜ್ಯ ಮಳೆಯಾಶ್ರಿತ ಕೃಷಿ ನೀತಿ,2014" ರನ್ವಯ ರಾಜ್ಯದ 24 ಜಿಲ್ಲೆಯ 106 ತಾಲ್ಲೂಕುಗಳಲ್ಲಿ 2023-24 ನೇ ಸಾಲಿನ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯದ ಕ್ರಿಯಾ ಯೋಜನೆ (ಭೌತಿಕ:ಸಂಖ್ಯೆಗಳಲ್ಲಿ, ಆರ್ಥಿಕ: ರೂ. ಲಕ್ಷಗಳಲ್ಲಿ)**

| ಕ್ರ. ಸಂ | ಘಟಕಗಳ ವಿವರ | ಘಟಕ ವೆಚ್ಚ(ರೂ. ಲಕ್ಷಗಳಲ್ಲಿ) | ಭೌತಿಕ (ಸಂಖ್ಯೆಗಳಲ್ಲಿ) | ಒಟ್ಟು ಅನುದಾನ ಬೇಡಿಕೆ (ರೂ. ಕೋಟಿಗಳಲ್ಲಿ) | ಪ್ರತಿ ತಾಲ್ಲೂಕಿಗೆ ಗುರಿ (ರಾಜ್ಯ ಮಳೆಯಾಶ್ರಿತ ಕೃಷಿ ನೀತಿ,2014 ರನ್ವಯ ರಾಜ್ಯದ 24 ಜಿಲ್ಲೆಯ 106 ತಾಲ್ಲೂಕುಗಳಿಗೆ) | | ಷರಾ |
|---|---|---|---|---|---|---|---|
| | | | | | ಭೌತಿಕ | ಆರ್ಥಿಕ (ರೂ. ಕೋಟಿಗಳಲ್ಲಿ) | |
| 1 | ಕ್ಷೇತ್ರ ಬದು ನಿರ್ಮಾಣ | 0.10 | **7423** | 7.42 | 70 | 0.07 | _ |
| 2 | ಕೃಷಿ ಹೊಂಡ | 0.50 | **7423** | 37.12 | 70 | 0.35 | _ |
| 3 | ಪಾಲಿಥೀನ್ ಹೊದಿಕೆ | 0.30 | **7423** | 22.29 | 70 | 0.21 | _ |
| 4 | ಕೃಷಿ ಹೊಂಡದ ಸುತ್ತಲು ತಂತಿ ಬೇಲಿ | 0.12 | **7423** | 8.91 | 70 | 0.08 | _ |
| 5 | ಡೀಸಲ್/ಪೆಟ್ರೋಲ್/ ಸೋಲಾರ್ ಪಂಪ್ ಸೆಟ್ | 0.30 | **7423** | 22.27 | 70 | 0.21 | _ |
| 6 | ಲಘು ನೀರಾವರಿ ಘಟಕ -ತುಂತುರು ನೀರಾವರಿ / ಹನಿ ನೀರಾವರಿ | 0.17 | **7423** | 0.00 | 70 | 0.00 | ಕೇಂದ್ರ ಪುರಸ್ಕೃತ **PMKSY-PDMC/Atal Bhoo Jal** ಯೋಜನೆಯೊಂದಿಗೆ ಒಗ್ಗೂಡಿಸುವಿಕೆ |
| 7 | ಆಡಳಿತ ವೆಚ್ಚ | ... | **...** | 2.00 | ... | ... | ಆಡಳಿತ ವೆಚ್ಚವು ಪ್ರಚಾರ/ಕಾರ್ಯಾಗಾರಗಳು/ದಾಖಲಾತಿ ನಿರ್ವಹಣೆ(Web/Mobile application)/ಸಾದಿಲ್ವಾರು ವೆಚ್ಚ ಮತ್ತು ಇತರೆ ವೆಚ್ಚಗಳನ್ನು ಒಳಗೊಂಡಿರುತ್ತದೆ. |
| | **ಒಟ್ಟು** | **1.49** | **7423** | **100.00** | **70** | **0.92** | |

**ಷರಾ:** ಮಣ್ಣಿನ ವಿಧ, ಕೃಷಿ ಹೊಂಡದ ಅಳತೆ ಹಾಗೂ ಪರಿಷ್ಕೃತ ದರಪಟ್ಟಿಯನ್ವಯ ಘಟಕ ವೆಚ್ಚ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ.

# ಅನುಭಂದ-1 B

**"ರಾಜ್ಯ ಮಳೆಯಾಶ್ರಿತ ಕೃಷಿ ನೀತಿ,2014" ರನ್ವಯ ರಾಜ್ಯದ 24 ಜಿಲ್ಲೆಯ 106 ತಾಲ್ಲುಕುಗಳ ವಿವರ**

| ಕ್ರ. ಸಂ. | ಜಿಲ್ಲೆ ("ರಾಜ್ಯ ಮಳೆಯಾಶ್ರಿತ ಕೃಷಿ ನೀತಿ,2014" ರನ್ವಯ) | **ಕೃಷಿ ಹವಾಮಾನ ಒಣ ವಲಯದ ತಾಲ್ಲೂಕುಗಳ ವಿವರ** |
|---|---|---|
| 1 | ಬಾಗಲಕೋಟೆ | 1. ಬಾದಾಮಿ |
| | | 2. ಬಾಗಲಕೋಟೆ |
| | | 3. ಹುನಗುಂದ |
| | | 4. ಬೀಳಗಿ |
| | | 5. ಜಮಖಂಡಿ |
| | | 6. ಮುಧೋಳ |
| 2 | ಬೆಂಗಳೂರು (ಗ್ರಾ) | 1. ದೇವನಹಳ್ಳಿ |
| | | 2. ದೊಡ್ಡಬಳ್ಳಾಪುರ |
| | | 3. ಹೊಸಕೋಟೆ |
| | | 4. ನೆಲಮಂಗಲ |
| 3 | ಬೆಂಗಳೂರು (ನ) | 1. ಆನೇಕಲ್ |
| | | 2. ಬೆಂಗಳೂರು (ದಕ್ಷಿಣ) |
| | | 3. ಬೆಂಗಳೂರು (ಉತ್ತರ) |
| 4 | ಬೆಳಗಾವಿ | 1. ರಾಮದುರ್ಗ |
| | | 2. ಗೋಕಾಕ |
| | | 3. ರಾಯಬಾಗ್ |
| | | 4. ಸವದತ್ತಿ |
| | | 5. ಅಥಣಿ |
| 5 | ಬಳ್ಳಾರಿ | 1. ಬಳ್ಳಾರಿ |
| | | 2. ಸಂಧೂರು |
| | | 3. ಸಿರುಗುಪ್ಪ |
| 6 | ಚಾಮರಾಜನಗರ | 1. ಕೊಳ್ಳೇಗಾಲ |
| | | 2. ಚಾಮರಾಜನಗರ |
| | | 3. ಯಲ್ಲಂದೂರು |
| | | 4. ಗುಂಡ್ಲುಪೇಟೆ |
| 7 | ಚಿಕ್ಕಬಳ್ಳಾಪುರ | 1. ಬಾಗೇಪಲ್ಲಿ |
| | | 2. ಚಿಕ್ಕಬಳ್ಳಾಪುರ |
| | | 3. ಗುಡಿಬಂಡೆ |
| | | 4. ಗೌರಿಬಿದನೂರು |
| | | 5. ಶಿಡ್ಲಘಟ್ಟ |
| | | 6. ಚಿಂತಾಮಣಿ |
| 8 | ಚಿಕ್ಕಮಗಳೂರು | ಕಡೂರು |
| 9 | ಚಿತ್ರದುರ್ಗ | 1. ಚಿತ್ರದುರ್ಗ |
| | | 2. ಚಳ್ಳಕೆರೆ |
| 9 | ಚಿತ್ರದುರ್ಗ | 3. ಹಿರಿಯೂರು |
| | | 4. ಹೊಸದುರ್ಗ |
| | | 5. ಹೊಳಲ್ಕೆರೆ |
| | | 6. ಮೊಳಕಾಲ್ಮೂರು |

| ಕ್ರ. ಸಂ. | ಜಿಲ್ಲೆ ("ರಾಜ್ಯ ಮಳೆಯಾಶ್ರಿತ ಕೃಷಿ ನೀತಿ,2014" ರನ್ವಯ) | ಕೃಷಿ ಹವಾಮಾನ ಒಣ ವಲಯದ ತಾಲ್ಲೂಕುಗಳ ವಿವರ |
|---|---|---|
| 10 | ದಾವಣಗೆರೆ | 1. ಹರಿಹರ |
| | | 2. ಜಗಳೂರು |
| | | 3. ದಾವಣಗೆರೆ |
| 11 | ಧಾರವಾಡ | ನವಲಗುಂದ |
| 12 | ಗದಗ | 1. ರೋಣ |
| | | 2. ನರಗುಂದ |
| | | 3. ಗದಗ |
| | | 4. ಮುಂಡರಗಿ |
| 13 | ಹಾಸನ | 1. ಅರಸೀಕೆರೆ |
| | | 2. ಚನ್ನರಾಯಪಟ್ಟಣ |
| | | 3. ಹಾಸನ |
| 14 | ಕಲಬುರ್ಗಿ | 1. ಅಫಜಲ್ ಪುರ |
| | | 2. ಚಿತ್ತಾಪುರ |
| | | 3. ಕಲಬುರಗಿ |
| | | 4. ಸೇಡಂ |
| | | 5. ಜೇವರ್ಗಿ |
| 15 | ಕೋಲಾರ | 1. ಬಂಗಾರಪೇಟೆ |
| | | 2. ಕೋಲಾರ |
| | | 3. ಮುಳಬಾಗಿಲು |
| | | 4. ಶ್ರೀನಿವಾಸಪುರ |
| | | 5. ಮಾಲೂರು |
| 16 | ಕೊಪ್ಪಳ | 1. ಗಂಗಾವತಿ |
| | | 2. ಕೊಪ್ಪಳ |
| | | 3. ಕುಷ್ಠಗಿ |
| | | 4. ಯಲಬುರ್ಗ |
| 17 | ಮಂಡ್ಯ | 1. ನಾಗಮಂಗಲ |
| | | 2. ಶ್ರೀರಂಗಪಟ್ಟಣ |
| | | 3. ಮಳವಳ್ಳಿ |
| | | 4. ಮದ್ದೂರು |
| | | 5. ಮಂಡ್ಯ |
| | | 6. ಪಾಂಡವಪುರ |
| | | 7. ಕೆ.ಆರ್.ಪೇಟೆ |
| 18 | ಮೈಸೂರು | 1. ಕೆ.ಆರ್. ನಗರ |
| | | 2. ಟಿ. ನರಸೀಪುರ |
| | | 3. ಮೈಸೂರು |
| | | 4. ನಂಜನಗೂಡು |
| 19 | ರಾಯಚೂರು | 1. ರಾಯಚೂರು |
| | | 2. ದೇವದುರ್ಗ |
| | | 3. ಮಾನವಿ |
| | | 4. ಲಿಂಗಸುಗೂರು |
| | | 5. ಸಿಂದನೂರು |
| 20 | ರಾಮನಗರ | 1. ಚನ್ನಪಟ್ಟಣ |
| | | 2. ರಾಮನಗರ |
| | | 3. ಮಾಗಡಿ |
| | | 4. ಕನಕಪುರ |

| ಕ್ರ. ಸಂ. | ಜಿಲ್ಲೆ ("ರಾಜ್ಯ ಮಳೆಯಾಶ್ರಿತ ಕೃಷಿ ನೀತಿ,2014" ರನ್ವಯ) | **ಕೃಷಿ ಹವಾಮಾನ ಒಣ ವಲಯದ ತಾಲ್ಲೂಕುಗಳ ವಿವರ** |
|---|---|---|
| 21 | ತುಮಕೂರು | 1. ತುರುವೇಕೆರೆ |
| | | 2. ಕುಣಿಗಲ್ |
| | | 3. ಮಧುಗಿರಿ |
| | | 4. ಪಾವಗಡ |
| | | 5. ಕೊರಟಗೆರೆ |
| | | 6. ಚಿಕ್ಕನಾಯಕನಹಳ್ಳಿ |
| | | 7. ಶಿರ |
| | | 8. ತಿಪಟೂರು |
| | | 9. ಗುಬ್ಬಿ |
| | | 10. ತುಮಕೂರು |
| 22 | ವಿಜಯಪುರ | 1. ಬಾಗೇವಾಡಿ |
| | | 2. ವಿಜಾಪುರ |
| | | 3. ಇಂಡಿ |
| | | 4. ಮುದ್ದೇಬಿಹಾಳ್ |
| | | 5. ಸಿಂದಗಿ |
| 23 | ವಿಜಯನಗರ | 1. ಹರಪನಹಳ್ಳಿ |
| | | 2. ಹಗರಿಬೊಮ್ಮನಹಳ್ಳಿ |
| | | 3. ಕೂಡ್ಲಿಗಿ |
| | | 4. ಹೊಸಪೇಟೆ |
| | | 5. ಹಡಗಲಿ |
| 24 | ಯಾದಗಿರಿ | 1. ಶಹಾಪುರ |
| | | 2. ಸುರಪುರ |
| | | 3. ಯಾದಗಿರಿ |

13/12/2023